Swabhimani Sahakari
Pages - 28, ₹12
Volume -13
Issue - 10
October - 2016

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ
ಮೀಸಲಾಗಿರುವ ಏಕೈಕ ಮಾಸಪತ್ರಿಕೆ




▸▸ ಸೌಹಾರ್ದ ಸಹಕಾರಿಗಳ ಸಂಖ್ಯೆ : 3818 ▸▸ 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 974



# ಸದಸ್ಯರಲ್ಲಿ ಹಾಗೂ ಸಾರ್ವಜನಿಕರಲ್ಲಿ ಸಹಕಾರಿಯ ಅಗತ್ಯತೆ ಹಾಗೂ ಸದ್ಭಾವನೆ ಬೆಳೆಸುವ ಸದಸ್ಯ ಸಂಪರ್ಕ ಕಾರ್ಯಕ್ರಮಗಳ ಆದ್ಯತೆ ಅಗತ್ಯ

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿ ಬಂಧುಗಳಿಗೆ ವಿಜಯದಶಮಿ, ನಾಡಹಬ್ಬ ದಸರಾ, ಮೊಹರಂ ಹಾಗೂ ದೀಪಗಳ ಹಬ್ಬ ದೀಪಾವಳಿಯ ಶುಭಾಷಯಗಳು. ಸಮಾಜದ ಅನಿಷ್ಟಗಳನ್ನು ದೂರ ಮಾಡಿ ಎಲ್ಲರ ಅಭಿವೃದ್ಧಿಯತ್ತ ಗಮನಹರಿಸುವ ನಾಡಹಬ್ಬ ಹಾಗೂ ದೀಪಗಳ ಹಬ್ಬ ಎಲ್ಲರ ಮನೆಮನಗಳಲ್ಲಿ ಜ್ಞಾನದ ಜ್ಯೋತಿಯನ್ನು ಬೆಳಗಿಸಿ ಅಭಿವೃದ್ಧಿ ಪಥದಲ್ಲಿ ಮುನ್ನಡೆಯಲು ಸಹಕಾರಿಯಾಗಲಿ ಎಂದು ಹಾರೈಸುತ್ತೇನೆ.

ಸೆಪ್ಟೆಂಬರ್ ಮಾಹೆಯಲ್ಲಿ ಎಲ್ಲಾ ಸಹಕಾರಿಗಳು ತಮ್ಮ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯನ್ನು ಅರ್ಥಪೂರ್ಣವಾಗಿ ನಡೆಸಿರುವಿರಾಗಿ ಭಾವಿಸುತ್ತೇನೆ. ವಾರ್ಷಿಕ ಮಹಾಸಭೆ ಔಪಚಾರಿಕವಾಗಿ ನಡೆಸುವ ಸಭೆಯಲ್ಲ. ಸಹಕಾರಿ ಸದಸ್ಯರ ವಾರ್ಷಿಕ ಮಿಲನ, ಸಹಕಾರಿಯ ವಾರ್ಷಿಕ ಚಟುವಟಿಕೆಗಳ ಜೊತೆಗೆ ಸಹಕಾರಿಯ ಸೌಲಭ್ಯಗಳ, ಸಮಸ್ಯೆಗಳ ಹಾಗೂ ಪರಿಹಾರೋಪಾಯ ಬಗ್ಗೆ ಚರ್ಚೆ ನಡೆಸುವುದಾಗಿರುತ್ತದೆ. ಸದಸ್ಯರ ಅಹವಾಲುಗಳ ವೇದಿಕೆ ಇದಾಗಿರುತ್ತದೆ. ಹೀಗಾಗಿ ಹೆಚ್ಚಿನ ಮಹತ್ವ ಈ ಸಭೆಗೆ ಇರುತ್ತದೆ.

ಸಹಕಾರಿಯ ಸಾಮಾನ್ಯ ಸಭೆಯೂ ಸೇರಿದಂತೆ ಎಲ್ಲಾ ಚಟುವಟಿಕೆಗಳು ಅರ್ಥಪೂರ್ಣವಾಗಿ ನಡೆಯಬೇಕಾದರೆ ಸಹಕಾರಿಯ ಆಡಳಿತ ಮಂಡಲಿಯವರು ಸದಸ್ಯರ ಜೊತೆಗೆ ನಿರಂತರವಾಗಿ ನಿಕಟ ಸಂಪರ್ಕ ಸಾಧಿಸುವುದು ಅಗತ್ಯವಾಗುತ್ತದೆ. ಸಂಪರ್ಕ ಕೇವಲ ಸದಸ್ಯತ್ವವನ್ನು ಪಡೆಯುವುದರಿಂದ ಬರುವುದಿಲ್ಲ. ವಿಭಾಗವಾರು ಸದಸ್ಯರ ಮಾಹೆಯಾನ ಸಂಪರ್ಕ ಸಭೆಗಳು ಜರುಗಬೇಕು. ಸಹಕಾರಿಯ ವ್ಯಾಪ್ತಿಯಲ್ಲಿ ಗಣರಾಜ್ಯೋತ್ಸವ, ಸ್ವಾತಂತ್ರ್ಯೋತ್ಸವ, ಮಕ್ಕಳ ದಿನಾಚರಣೆ, ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಗಳು, ಹಿರಿಯ ಸದಸ್ಯರಿಗೆ, ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಠ ಸಾಧನೆಗಳನ್ನು ಮಾಡಿರುವ ಸಾಧಕರಿಗೆ ಸನ್ಮಾನಗಳು, ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮಗಳು, ಸದಸ್ಯರ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರಗಳನ್ನು ಹಮ್ಮಿಕೊಳ್ಳುವುದು ಹಾಗೂ ಹಬ್ಬ ಹರಿದಿನಗಳ ಸಾಮೂಹಿಕ ಆಚರಣೆ ಮಾಡುವುದರ ಮೂಲಕ ಸಹಕಾರಿಯು ಸದಸ್ಯರ ಮನಸ್ಸಿನಲ್ಲಿ ಭದ್ರವಾಗಿ ನೆಲೆಯೂರಲು ಹಾಗೂ ಸಹಕಾರಿಯು ನನ್ನದೆಂಬ ಭಾವನೆಯನ್ನು ಮೂಡಿಸಿ ಬೆಳೆಸಲು ಸಾಧ್ಯವಾಗುತ್ತದೆ.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಸಂಖ್ಯಾತ್ಮಕ ಬೆಳವಣಿಗೆಯ ಜೊತೆಗೆ ಗುಣಾತ್ಮಕ ಬೆಳವಣಿಗೆಯಾದರೆ ಸಹಕಾರ ಕ್ಷೇತ್ರದ ಆರೋಗ್ಯಕರ ಬೆಳವಣಿಗೆ ಸಾಧ್ಯ. ಆರೋಗ್ಯಕರ ಬೆಳವಣಿಗೆಗಾಗಿ ಸಹಕಾರಿಯ ಚಟುವಟಿಕೆಗಳಲ್ಲಿ ಸದಸ್ಯರ ಭಾಗವಹಿಸುವಿಕೆ ಮುಖ್ಯವಾದದ್ದು. ಸದಸ್ಯರ ಭಾಗವಹಿಸುವಿಕೆಗಾಗಿ ಸದಸ್ಯರನ್ನು ಸಹಕಾರಿಯ ಬಗ್ಗೆ ಅಗತ್ಯತೆ ಹಾಗೂ ಸದ್ಭಾವನೆ ಬೆಳೆಸುವಲ್ಲಿ ಈ ಸಂಪರ್ಕ ಪ್ರಕ್ರಿಯೆಗೆ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಆದ್ಯತಾ ವಲಯವೆಂದು ಭಾವಿಸಿ ಹೆಚ್ಚಿನ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

> ಸಹಕಾರಿಯ ವ್ಯಾಪ್ತಿಯಲ್ಲಿ ಗಣರಾಜ್ಯೋತ್ಸವ, ಸ್ವಾತಂತ್ರ್ಯೋತ್ಸವ, ಮಕ್ಕಳ ದಿನಾಚರಣೆ, ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಗಳು, ಹಿರಿಯ ಸದಸ್ಯರಿಗೆ, ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಠ ಸಾಧನೆಗಳನ್ನು ಮಾಡಿರುವ ಸಾಧಕರಿಗೆ ಸನ್ಮಾನಗಳು, ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮಗಳು, ಸದಸ್ಯರ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರಗಳನ್ನು ಹಮ್ಮಿಕೊಳ್ಳುವುದು.

**ಗುರುನಾಥ ಜಾಂತಿಕರ,** ಅಧ್ಯಕ್ಷರು

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಗುರುನಾಥ ಜಾಂತಿಕರ**
ಗೌರವ ಅಧ್ಯಕ್ಷರು

**ಶ್ರೀ ಹೆಚ್.ವಿ.ರಾಜೀವ**
ಗೌರವ ಉಪಾಧ್ಯಕ್ಷರು

**ಶ್ರೀ ಎಸ್.ಆರ್.ಸತೀಶಚಂದ್ರ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು



**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ : 080-23378375-80, 23474408, 23573291
ಇ-ಮೇಲ್ : souharda@souharda.coop
ವೆಬ್‌ಸೈಟ್ : www.souharda.coop


## ಒಳ ಪುಟಗಳಲ್ಲಿ . . .


ಜ್ಞಾನ ಜ್ಯೋತಿ ........ 4

ರಾಷ್ಟ್ರೀಯ ಸಹಕಾರ ಯೂನಿಯನ್‌ನ ವಾರ್ಷಿಕ ಮಹಾಸಭೆಯಲ್ಲಿ ನೇರ ತೆರಿಗೆ ಸಂಹಿತೆಯಿಂದ ಸಹಕಾರ ಕ್ಷೇತ್ರವನ್ನು ಮುಕ್ತವಾಗಿರಿಸುವಂತೆ ಒತ್ತಾಯ - ಶ್ರೀ ಗುರುನಾಥ ಜಾಂತಿಕರ ........ 5

ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಸತತ ಪ್ರಯತ್ನದ ಫಲ ........ 9

ಮಾರಾಟಾಧಿಕಾರಿಯ ಕರ್ತವ್ಯ ಹಾಗೂ ಜವಾಬ್ದಾರಿಗಳು ........ 18

ಸಾಮಾನ್ಯ ಸೇವಾ ಕೇಂದ್ರ ಯೋಜನೆ ........ 21

ಕಗ್ಗ ಪದ್ಯಗಳಲ್ಲಿ ಸಹಕಾರ ಸಾರ - 6 ........ 25

RBI NEWS - SEPTMBER 2016 ........ 26

CO-OPERATIVE MOVEMENT IN INDIA AND ABROAD - THE ROAD AHEAD ........ 27


# ಸಂಪಾದಕೀಯ

## ಎನ್.ಸಿ.ಡಿ.ಸಿ. (NCDC) ಯಿಂದ ಸೌಹಾರ್ದ ಸಹಕಾರಿಗಳಿಗೆ ಹಣಕಾಸಿನ ನೆರವು ಅಭಿವೃದ್ಧಿಗೆ ಪೂರಕ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ತನ್ನ ಸದಸ್ಯ ಸಹಕಾರಿಗಳಿಗೆ ಹಣಕಾಸು ನೆರವು ಒದಗಿಸುವ ಉದ್ದೇಶದಿಂದ ನಬಾರ್ಡ್, ಎನ್‌ಸಿಡಿಸಿ, ನಬಾರ್ಡ್ ಫೈನಾನ್ಸ್ ಸಂಸ್ಥೆಗಳೊಂದಿಗೆ ನಿರಂತರ ಚರ್ಚೆಗಳನ್ನು ನಡೆಸುತ್ತಾ ಬಂದಿರುವ ಫಲವಾಗಿ ಪ್ರಸ್ತುತ ನ್ಯಾಷನಲ್ ಕೋ-ಆಪರೇಟಿವ್ ಡೆವಲಪ್‌ಮೆಂಟ್ ಕಾರ್ಪೋರೇಷನ್ (ಎನ್‌ಸಿಡಿಸಿ), ನವದೆಹಲಿ ಇವರು ಸೌಹಾರ್ದ ಸಹಕಾರಿಗಳಿಗೆ ಸಾಲದ ರೂಪದಲ್ಲಿ ಹಣಕಾಸು ನೆರವು ನೀಡಲು ಒಪ್ಪಿ, ಕಾರ್ಯರೂಪಕ್ಕೆ ತಂದಿರುವುದು ಸ್ವಾಗತಾರ್ಹ ಹಾಗೂ ಸಂತೋಷಕರ. ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ವಿಶೇಷವಾಗಿ ಸಾಂಸ್ಥಿಕ ಆರ್ಥಿಕ ನೆರವು ಅಪೇಕ್ಷಿಸುವ ಸೌಹಾರ್ದ ಸಹಕಾರಿಗಳಿಗೆ ಇದು ಉತ್ಸಾಹದಾಯಕವಾಗಿದೆ.

ಸಾಲದ ರೂಪದಲ್ಲಿ ಹಣಕಾಸು ನೆರವು ಪಡೆಯುವ ಬಗ್ಗೆ ಎನ್‌ಸಿಡಿಸಿಯವರ ಮಾರ್ಗಸೂಚಿ ಹಾಗೂ ಬಡ್ಡಿದರಗಳ ವಿವರಗಳನ್ನು ಸಹಕಾರಿಗಳಿಗೆ ಒದಗಿಸಲು ಸಂಯುಕ್ತ ಸಹಕಾರಿ ಕ್ರಮವಿಟ್ಟಿರುವುದು ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ವಿಶೇಷವಾಗಿ ಹಣಕಾಸಿನ ನೆರವನ್ನು ಅಪೇಕ್ಷಿಸುವವರಿಗೆ ಉತ್ತಮ ಕ್ರಮವಾಗಿದೆ. ಈಗಾಗಲೇ ಬೆಂಗಳೂರಿನ ಜ್ಞಾನಶಾಲೆ ಸೌಹಾರ್ದ ಸಹಕಾರಿಯವರು ತಮ್ಮ ಸದಸ್ಯರಿಗೆ ಸಾಲ ನೀಡುವುದಕ್ಕಾಗಿ ರೂ 60.00 ಲಕ್ಷಗಳನ್ನು ಎನ್.ಸಿ.ಡಿ.ಸಿ.ಯಿಂದ ಪಡೆದಿರುವುದು ಬೇರೆಲ್ಲಾ ಸಹಕಾರಿಗಳು ಪ್ರಯೋಜನ ಪಡೆಯಲು ಅವಕಾಶ ಹೆಚ್ಚಿದಂತಾಗಿದೆ.

ಸೌಹಾರ್ದ ಸಹಕಾರಿಗಳು ತಮ್ಮ ಸಂಸ್ಥೆಗೆ ಕಟ್ಟಡ ಕಟ್ಟುವುದಕ್ಕೆ, ಕಛೇರಿಯ ಒಳಾಂಗಣ ವಿನ್ಯಾಸ ಮಾಡಿಸಿ ಕ್ರಮವಿಡುವುದಕ್ಕೆ, ಇನ್‌ಫ್ರಾಸ್ಟ್ರಕ್ಚರ್ ವ್ಯವಸ್ಥೆಗಳಿಗೆ, ಪ್ರಾಸೆಸಿಂಗ್ ಯೂನಿಟ್ ಸ್ಥಾಪಿಸುವುದಕ್ಕೆ, ಹಾಲಿನಿಂದ ತಯಾರಿಸುವ ವಸ್ತುಗಳ ಘಟಕಗಳ ಸ್ಥಾಪನೆ, ಹಾಲಿ ಕಾರ್ಯನಿರ್ವಹಿಸುತ್ತಿರುವ ಘಟಕಗಳ ಖರೀದಿಗೆ ಹಾಗೂ ಸದಸ್ಯರಿಗೆ ಚಿನ್ನಾಭರಣ ಸಾಲ, ವಾಹನ ಸಾಲ ಮತ್ತು ಸ್ವಸಹಾಯ ಗುಂಪುಗಳಿಗೆ ಸಾಲಗಳನ್ನು ನೀಡುವುದಕ್ಕಾಗಿ ಎನ್.ಸಿ.ಡಿ.ಸಿ.ಯಿಂದ ಸಾಲ ಪಡೆಯಬಹುದು. ಈ ಸಾಲಕ್ಕೆ ಬಡ್ಡಿ ದರ ಶೇ.9.9 ಹಾಗೂ 6 ತಿಂಗಳ ಅವಧಿಗೆ ಶೇ.9.4 ಇರುತ್ತದೆ.

ರಾಜ್ಯದ ಸೌಹಾರ್ದ ಸಹಕಾರಿಗಳು ಗಮನಿಸಬೇಕಾದ ವಿಷಯವೆಂದರೆ ಸೌಹಾರ್ದ ಸಹಕಾರಿಗಳ ಹೆಸರಿನಲ್ಲಿರುವ ಆಸ್ತಿಯ ಆಧಾರದ ಮೇಲೆ ಅಥವಾ ಬ್ಯಾಂಕ್‌ನಲ್ಲಿರುವ ಎಫ್.ಡಿ.ಗಳ ಆಧಾರದ ಮೇಲೆ ಈ ಸಾಲ ಮಂಜೂರಾಗುತ್ತದೆ. ಸಹಕಾರಿಯು ಹೊಂದಿರುವ ಒಟ್ಟು ಆಸ್ತಿಯ 75% ಮೊಬಲಗು ಹಣವನ್ನು ಸಾಲವನ್ನಾಗಿ ಕೊಡಲಾಗುತ್ತದೆ. ಬೆಂಗಳೂರಿನ ಎನ್.ಸಿ.ಡಿ.ಸಿ. ಕಛೇರಿಯವರಿಗೆ 80.00 ಲಕ್ಷದವರೆಗೆ, ಇದಕ್ಕಿಂತ ಹೆಚ್ಚಿಗೆ ದೆಹಲಿಯ ಎನ್.ಸಿ.ಡಿ.ಸಿ. ಕೇಂದ್ರ ಕಛೇರಿಯಿಂದ ಮಂಜೂರಾತಿ ಪಡೆಯಬೇಕಾಗುತ್ತದೆ. ರಾಜ್ಯದ ಸೌಹಾರ್ದ ಸಹಕಾರಿಗಳು ಈ ಅವಕಾಶವನ್ನು ಉಪಯೋಗಿಸಿಕೊಂಡಲ್ಲಿ ಸೌಹಾರ್ದ ಸಹಕಾರಿಗಳು ತಮ್ಮ ಸದಸ್ಯರ ವಿವಿಧ ರೀತಿಯ ಸಾಲ ನೀಡುವಿಕೆಗೆ ಸಾಲ ನೀಡುವಲ್ಲಿ ಮರುಹಣಕಾಸು ಸಮಸ್ಯೆ ನಿವಾರಣೆಯಾಗಿ ಅಭಿವೃದ್ಧಿ ಪಥದಲ್ಲಿ ಸಾಗಲು ಸಾಧ್ಯವಾಗುತ್ತದೆ ಎಂದು ಸಂತೋಷಪಡಬಹುದು. ■



## ಜ್ಞಾನ ಜ್ಯೋತಿ

ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಉಪನ್ಯಾಸ ಸಂಗ್ರಹಗಳ ಆಯ್ದ ಭಾಗ

### ದೇವರ ಇರುವಿಕೆ ಆಧಾರ

'ಭಕ್ತಿಯೋಗ' ಇದೊಂದು ಮಧುರವಾದ ಭಾವನೆ. ಇದು ನಿರಂತರವಾಗಿ ಹರಿಯಬೇಕು. ಅನಂತತೆಯತ್ತ, ಪರಮ ಸತ್ಯದತ್ತ ಹರಿಯೋದಿಕ್ಕೆ ದೇವರು ಎನ್ನುತ್ತೇವೆ. ಇದು ಸುಂದರವಾದ ತತ್ವ. ಅದು ವಸ್ತುಗಳ ಅಸ್ತಿತ್ವಕ್ಕೆ ಆಧಾರ. ಯಾವುದೇ ವಸ್ತುವು ಇರಬೇಕಾದರೆ ಅದಕ್ಕೊಂದಿಷ್ಟು ಆಧಾರ ಇರಬೇಕಾಗುತ್ತದೆ. ಅದಕ್ಕೆ ಪರಮಾಧಾರ ಎಂದು ಕರೆಯೋದು. ಆ ಆಧಾರಕ್ಕೆ ದೇವರು ಅಥವಾ ಅಂತಿಮ ಸತ್ಯ ಎಂದು ಕರೆಯಲಾಗುತ್ತದೆ. ಈ ಮಾತನ್ನು ಜಗತ್ತಿನ ಶ್ರೇಷ್ಠ ಚಿಂತಕರು, ಅನುಭಾವಿಗಳು, ಹಲವಾರು ಜನ ತತ್ವವೇತ್ತರು ಹೇಳಿದ್ದಾರೆ. ಅದು ತಲೆ ಒಪ್ಪುವಂತ ಮಾತು ಅಷ್ಟೇ ಅಲ್ಲ, ಅನುಭವಿಸಬೇಕಾದ ಮಾತು.

ವಸ್ತು ಎಲ್ಲಿಯವರೆಗೆ ಸೀಮಿತವಾಗಿರುತ್ತದೆ ಅಲ್ಲಿಯವರೆಗೆ ಆಧಾರ ಇರಬೇಕಲ್ಲ. ಎಲ್ಲ ಪದಾರ್ಥಗಳಿಗೆ ಭೂಮಿ ಆಧಾರ. ಆದರೆ ಭೂಮಿ ಅಂತರಿಕ್ಷದಲ್ಲಿ ತೇಲುತ್ತಾ ಇದೆ. ಈ ಭೂಮಿಯ ಚಲನೆಗೆ, ಅಸ್ತಿತ್ವಕ್ಕೆ ಆಧಾರ ಬೇಕಲ್ಲ! ಎಲ್ಲಾ ವಸ್ತುಗಳು ಆಕಾಶದಲ್ಲಿ ತೇಲುತ್ತಾ ಇವೆ. ಆಕಾಶ ಸರಿಸಿದರೆ ಎಲ್ಲಾ ನಿರಾಧಾರ ಆಗುತ್ತದೆ. ಇಂಥ ಅವಕಾಶ, ಬಯಲು ಸರ್ವ ಪದಾರ್ಥಗಳ ಆಧಾರ. ಭೌತಶಾಸ್ತ್ರಜ್ಞರು ಹೇಳುವ ಪ್ರಕಾರ ಆಕಾಶವೂ ಶಾಶ್ವತವಲ್ಲ! ಸ್ಟೀಫನ್‌ಹಾಕಿನ್‌ನಂತವರು ಒಂದು ಸಿದ್ಧಾಂತ ಮಂಡಿಸಿದ್ದಾರೆ. ಈ ಆಕಾಶ, ಪದಾರ್ಥಗಳು, ಭೂಮಿ ಇವು ಪ್ರತ್ಯೇಕ ಅಲ್ಲ, ಇವುಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಇದರ ಅರ್ಥ ಇಷ್ಟೇ ಈ ಜಗತ್ತು ಮೊದಲು ಇರಲಿಲ್ಲ... ಕೊನೆಗೊಮ್ಮೆ ಮರೆಯಾಗುತ್ತದೆ. ಸಮಸ್ತ ಪದಾರ್ಥಗಳೆಲ್ಲಾ ಮರೆಯಾಗುತ್ತವೆ. ಎಲ್ಲಾ ಮರೆಯಾಗಿ ಉಳಿಯುತ್ತದೆಯಲ್ಲ ಅದು ಪರಮ ಸತ್ಯ. ಅದು ದೇವರು, ಪರಮ ಆಧಾರ. ಯಾವುದು ಎಲ್ಲಾ ಪದಾರ್ಥಗಳಿಗೆ, ಜೀವಜಗತ್ತಿಗೆ ಆಧಾರವಾಗಿದೆಯೋ ಅದು ಪರಮ ಆಧಾರ. ಅದು ಮೂಲ ಅಸ್ತಿತ್ವ. ಅದು ಇಲ್ಲದಿದ್ದರೆ ನಾನು ಇಲ್ಲ, ನೀನೂ ಇಲ್ಲ.... ಜಗತ್ತೇ ಇಲ್ಲ.

ಮನುಷ್ಯನಿಗೆ ಒಮ್ಮೊಮ್ಮೆ ಭ್ರಮೆ ಬರುತ್ತದೆ. ನಾನು ಎನ್ನುವ ಅಹಂ ತುಂಬುತ್ತದೆ. ನಮಗೆ ಪದವಿ ಸಿಕ್ಕ ತಕ್ಷಣ – ನಾನಿಲ್ಲದಿದ್ದರೆ ಯಾರೂ ಇಲ್ಲ... ನನ್ನನ್ನು ಅವರು ಅವಲಂಬಿಸಿಕೊಂಡಿದ್ದಾರೆ ಎಂದು ಹೇಳುತ್ತೇವೆ. ಮನುಷ್ಯನೇ ಪರಾವಲಂಬಿ... ಇವನು ಯಾರನ್ನು ರಕ್ಷಿಸುತ್ತಾನೆ? ಈ ಅಹಂ ಹೋಗಬೇಕು. ಮನದಲ್ಲಿ ಒಂದಿಷ್ಟು ಪ್ರೇಮ ಬೆಳೆಯಬೇಕು, ಭಾವ ಸ್ಪರ್ಶ ಇರಬೇಕು. ಅದು ಭಕ್ತಿ. ದೇವರ ಸ್ಪಷ್ಟ ಕಲ್ಪನೆ ನಮಗೆ ಇರಬೇಕು.

ಮನುಷ್ಯನಿಗೆ ಬರಿ ತಲೆ ಅಷ್ಟೇ ಅಲ್ಲ... ಭಾವನೆ ಇರಬೇಕು, ಮನಸ್ಸು ಅನುಭವಿಸಬೇಕು. ಎದೆಯಲ್ಲಿ ಪ್ರೀತಿ ಇರಬೇಕು... ಅದು ಭಕ್ತಿಯ ಪಾರಮ್ಯ. ಮನುಷ್ಯ ಮನುಷ್ಯನಾಗುವುದು ಹೃದಯದಿಂದ... ಮನುಷ್ಯ ದೊಡ್ಡವನಾಗುವುದು ಸುಂದರ ಹೃದಯದಿಂದ. Greatness does not comes from intelligence, It comes from the heart. ಜೀವನದಲ್ಲಿ ಎಷ್ಟು ಮಾಡಿದ್ದೇವೆ.... ಎಷ್ಟು ದಿನ ಕಳೆದಿದ್ದೇವೆ ಎಂಬುದು ಮುಖ್ಯ ಅಲ್ಲ. ಎಷ್ಟು ಸಂತೋಷದ ದಿನಗಳನ್ನು ಕಳೆದಿದ್ದೇವೆ, ಎಷ್ಟು ಜನರನ್ನು ಸಂತೋಷಗೊಳಿಸಿದ್ದೇವೆ? ಎಂಬುದು ಮುಖ್ಯ.

## 63ನೇ ಅಖಿಲ ಭಾರತ ಸಹಕಾರ ಸಪ್ತಾಹ – 2016

## 63rd All India Cooperative Week Celebration – 2016

ರಾಷ್ಟ್ರೀಯ ಸಹಕಾರ ಯೂನಿಯನ್, ನವದೆಹಲಿ ಇವರ ಮಾರ್ಗದರ್ಶನದಲ್ಲಿ ರಾಷ್ಟ್ರದ ಎಲ್ಲಾ ಸಹಕಾರ ಸಂಸ್ಥೆಗಳು ಪ್ರತಿ ವರ್ಷ ಸಹಕಾರ ಸಪ್ತಾಹವನ್ನು ಅರ್ಥಪೂರ್ಣವನ್ನಾಗಿ ಆಚರಿಸುವುದರ ಮೂಲಕ ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು ಅವಶ್ಯಕವಾಗುತ್ತದೆ. ಈ ಬಾರಿ ಸಹಕಾರ ಸಪ್ತಾಹ 63ನೇ ಅಖಿಲ ಭಾರತ ಸಹಕಾರ ಸಪ್ತಾಹ – 2016. ಈ ಬಾರಿಯ ಸಪ್ತಾಹದ ಆಚರಣೆಯ ಧ್ಯೇಯ "ಸುಸ್ಥಿರ ಅಭಿವೃದ್ಧಿ ಹಾಗೂ ಬೆಳವಣಿಗೆಯಲ್ಲಿ ಸಹಕಾರ ಸಂಘಗಳ ಪಾತ್ರ" ಎಂಬುದಾಗಿದೆ (Role of Cooperatives in sustainable Development and Growth) 7 ದಿನಗಳ ಅವಧಿಯಲ್ಲಿ ಪ್ರತಿ ದಿನ ಸಹಕಾರ ಕ್ಷೇತ್ರದ ಒಂದೊಂದು ವಿಭಾಗ ಅಭಿವೃದ್ಧಿಗೆ ಒತ್ತುಕೊಡುವ ವಿಷಯಗಳ ವಿವರ ಈ ಕೆಳಕಂಡಂತಿದೆ.

| | |
|---|---|
| 14–11–2016 | ಶಿಕ್ಷಣ ಹಾಗೂ ತರಬೇತಿಯ ಮೂಲಕ ಸಹಕಾರ ಸಂಘಗಳನ್ನು ಬಲಪಡಿಸುವುದು. (Empowering Cooperatives through Education and Training) |
| 15–11–2016 | ಸಹಕಾರ ಸಂಘಗಳ ಮೂಲಕ ಉದ್ಯಮಶೀಲತೆ ಹಾಗೂ ಕೌಶಲ್ಯಾಭಿವೃದ್ಧಿ. (Skill and Entrepreneurship Development through Cooperatives) |
| 16–11–2016 | ಸಹಕಾರ ಕ್ಷೇತ್ರದ ಮೂಲಕ ಆರ್ಥಿಕ ಸೇರ್ಪಡೆ. (Financial inclusion through Cooperatives) |
| 17–11–2016 | ಸರಕಾರದ ಪ್ರಮುಖ ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ಸಹಕಾರ ಸಂಘಗಳ ಮೂಲಕ ಅನುಷ್ಠಾನಗೊಳಿಸುವುದು. (Implementation of flagship Government Schemes and programmes through Cooperatives. |
| 18–11–2016 | ಸಹಕಾರಿ ಸಂಘಗಳಲ್ಲಿ ತಾಂತ್ರಿಕತೆಯನ್ನು ಅಳವಡಿಸುವುದು. (Technology adoption by Cooperatives.) |
| 19–11–2016 | ಸಹಕಾರ ಸಂಘಗಳ ಮೂಲಕ ಯುವಕರ ಮಹಿಳೆಯರ ಹಾಗೂ ಅಬಲ ವರ್ಗದವರ ಸಬಲೀಕರಣ. (Empowerment of Youth, Women and Weaker sections through Cooperatives) |
| 20–11–2016 | ಸಹಕಾರ ಸಂಘಗಳ ಮೂಲಕ ಉತ್ತಮ ಆಡಳಿತ, ಮೌಲ್ಯಗಳು ಹಾಗೂ ನಾಯಕತ್ವ ಅಭಿವೃದ್ಧಿ. (Good Governance Values and Leadership through Cooperatives) |




# ರಾಷ್ಟ್ರೀಯ ಸಹಕಾರ ಯೂನಿಯನ್‌ನ ವಾರ್ಷಿಕ ಮಹಾಸಭೆಯಲ್ಲಿ ನೇರ ತೆರಿಗೆ ಸಂಹಿತೆಯಿಂದ ಸಹಕಾರ ಕ್ಷೇತ್ರವನ್ನು ಮುಕ್ತವಾಗಿರಿಸುವಂತೆ ಒತ್ತಾಯ

## - ಶ್ರೀ ಗುರುನಾಥ ಜಾಂತಿಕರ

ರಾಷ್ಟ್ರೀಯ ಸಹಕಾರಿ ಯೂನಿಯನ್‌ನ ವಾರ್ಷಿಕ ಮಹಾಸಭೆಯಲ್ಲಿ ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಮಾತನಾಡಿ, ದೇಶದ ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ರಾಷ್ಟ್ರೀಯ ಸಹಕಾರ ಯೂನಿಯನ್‌ನ ಪಾತ್ರ ಅತ್ಯಂತ ಮಹತ್ವದ್ದು. ವಿಶೇಷವಾಗಿ ದೇಶದಲ್ಲಿ ಬದಲಾಗುತ್ತಿರುವ ಸಹಕಾರಿ ಕಾಯ್ದೆಗಳಲ್ಲಿ ಏಕರೂಪತೆ ಅಗತ್ಯವಿದೆ. ಈ ದೇಶದ ಸಂವಿಧಾನದ 97ನೇ ತಿದ್ದುಪಡಿಯ ಆಶಯದಂತೆ ಸಹಕಾರಿಗಳಿಗೆ ಹೆಚ್ಚಿನ ಸ್ವಾಯತ್ತತೆ ನೀಡುವ, ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆ ಇಲಾಖೆಯವರ ತಗಾದೆ, ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಮತ್ತು ಠೇವಣಿದಾರರ ಹಿತರಕ್ಷಣಾ ಮಸೂದೆ, 2015 ವಿಷಯಗಳ ಬಗ್ಗೆ ರಾಷ್ಟ್ರೀಯ ಸಹಕಾರ ಯೂನಿಯನ್‌ನ ಅಧ್ಯಕ್ಷರು ಹಾಗೂ ರಾಜ್ಯಸಭಾ ಸದಸ್ಯರಾದ ಶ್ರೀ ಚಂದ್ರಪಾಲ್‌ಸಿಂಗ್ ಯಾದವ್‌ರವರ ಗಮನ ಸೆಳೆದು ಮಾತನಾಡಿದರು. ಇದಕ್ಕೆ ಸಕರಾತ್ಮಕವಾಗಿ ಸ್ಪಂದಿಸಿದ ಶ್ರೀ ಚಂದ್ರಪಾಲ್‌ಸಿಂಗ್ ಯಾದವ್‌ರವರು ಸೂಕ್ತ ಕ್ರಮವಿಡುವುದಾಗಿ ಭರವಸೆ ನೀಡಿದರು.



ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಚಟುವಟಿಕೆಗಳ ಮೌಲ್ಯಮಾಪನ ಸಭೆಯಲ್ಲಿ ಮೈಸೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರುಗಳಾದ ಡಾ. ಯಶವಂತ ಡೋಂಗ್ರೆ ಹಾಗೂ ಡಾ. ಇಂದಿರಾರವರೊಂದಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಧಿಕಾರಿಗಳು.



ಬರ್ಡ್ (ಬ್ಯಾಂಕರ್ಸ್ ಇನ್ಸ್ಟಿಟ್ಯೂಟ್ ಆಫ್ ರೂರಲ್ ಡೆವಲಪ್‌ಮೆಂಟ್), ಲಕ್ನೋ ಅಧಿಕಾರಿಗಳಾದ ಡಾ. ಪಿ.ಜಗನ್ನಾಥನ್ ಹಾಗೂ ಶ್ರೀಮತಿ ಶಿಖಾ ಮತ್ತು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾದ ಶ್ರೀ ವಸಂತ್‌ನಾಯಕ್ ಇವರೊಂದಿಗೆ ಚರ್ಚೆಯಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಧಿಕಾರಿಗಳು.

## ಅಭಿನಂದನೆಗಳು

### ಶ್ರೀ ಶೇಖರಗೌಡ ಮಾಲಿ ಪಾಟೀಲರಿಗೆ ಗೌರವ ಡಾಕ್ಟರೇಟ್



ಶ್ರೀ ಶೇಖರಗೌಡ ಮಾಲಿ ಪಾಟೀಲ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಇವರು ಸಹಕಾರ ಕ್ಷೇತ್ರಕ್ಕೆ ಸಲ್ಲಿಸಿರುವ ಅನುಪಮ ಸೇವೆಯನ್ನು ಗುರುತಿಸಿರುವ "ಇಂಡಿಯನ್ ವರ್ಚುಯಲ್ ಯುನಿವರ್ಸಿಟಿ ಫಾರ್ ಪೀಸ್ ಅಂಡ್ ಎಜುಕೇಷನ್" ಸಂಸ್ಥೆಯು ಶ್ರೀ ಶೇಖರಗೌಡ ಮಾಲಿ ಪಾಟೀಲರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ಪ್ರಧಾನ ಮಾಡಿ ಸನ್ಮಾನಿಸಿ, ಗೌರವಿಸಿದೆ. ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರು ಹಾಗೂ ಅಧಿಕಾರಿಗಳು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

### ಸಂಯುಕ್ತ ಸಹಕಾರಿಯ ದಾವಾ ಪಂಚಾಯಿತಿ ನ್ಯಾಯಾಲಯದ ಕಾರ್ಯಚಟುವಟಿಕೆಗಳ ತಿಳುವಳಿಕೆ ನೀಡುವ ಕಾರ್ಯಾಗಾರ

## ದಾವೆಗಳ ಇತ್ಯರ್ಥವೇ ನಮ್ಮ ಗುರಿ, ವಿಳಂಬಕ್ಕೆ ಅವಕಾಶವಿಲ್ಲ - ಪೀಠಾಧಿಕಾರಿ ಶ್ರೀ ಕೆ.ಎಲ್. ನರಸಿಂಹಮೂರ್ತಿ





**ಬೆಂಗಳೂರು :** ಸಂಯುಕ್ತ ಸಹಕಾರಿಯ ಬೆಂಗಳೂರು ವಿಭಾಗೀಯ ಕಛೇರಿ ವತಿಯಿಂದ ಬೆಂಗಳೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ದಿನಾಂಕ : 28.09.2016ರಂದು ಬೆಂಗಳೂರಿನ ಪಾರಿಜಾತ ಗೇಟ್ ವೇ ನಲ್ಲಿ ಏರ್ಪಡಿಸಲಾಗಿದ್ದ ಒಂದು ದಿನದ ಕಾರ್ಯಾಗಾರವನ್ನು ಸಂಯುಕ್ತ ಸಹಕಾರಿಯ ದಾವಾ ಪಂಚಾಯಿತಿ ನ್ಯಾಯಾಲಯದ ಪೀಠಾಧಿಕಾರಿ ಶ್ರೀ ಕೆ.ಎಲ್.ನರಸಿಂಹಮೂರ್ತಿಯವರು ಉದ್ಘಾಟಿಸಿದರು.

ನಂತರ ಸಭೆಯನ್ನುದ್ದೇಶಿಸಿ ಮಾತನಾಡಿದ ಶ್ರೀಯುತರು ರಾಜ್ಯದಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ನಿರಂತರ ಪ್ರಯತ್ನದ ಫಲವಾಗಿ ಪ್ರತ್ಯೇಕ ದಾವಾ ಪಂಚಾಯಿತಿ ನ್ಯಾಯಾಲಯವು ಮಂಜೂರಾಗಿ, ಕಾರ್ಯಾಚರಣೆ ಪ್ರಾರಂಭವಾಗಿದೆ. ಇದಕ್ಕಾಗಿ ಆಡಳಿತ ಮಂಡಲಿಯವರನ್ನು ವಿಶೇಷವಾಗಿ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರನ್ನು ಅಭಿನಂದಿಸುತ್ತೇನೆ. ಕಾರ್ಯಾಚರಣೆ ಪ್ರಾರಂಭವಾದ ನಂತರ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಈ ನ್ಯಾಯಾಲಯದ ಕಾರ್ಯಾಚರಣೆ ಬಗ್ಗೆ ಹಾಗೂ ದಾವಾ ದಾಖಲಾತಿಯ ಬಗ್ಗೆ ತರಬೇತಿ ನೀಡುವುದು ಅವಶ್ಯಕವೆಂಬುದನ್ನು ಪರಿಗಣಿಸಿ, ರಾಜ್ಯಾದ್ಯಂತ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಶ್ಲಾಘನೀಯ.

ಈ ನ್ಯಾಯಾಲಯ ಪ್ರತ್ಯೇಕವಾಗಿ ಸೌಹಾರ್ದ ಸಹಕಾರಿಗಳಿಗಾಗಿಯೇ ಕಾರ್ಯನಿರ್ವಹಿಸುವುದರಿಂದ ಇಲ್ಲಿ ದಾವೆಗಳ ಇತ್ಯರ್ಥವೇ ನಮ್ಮ ಗುರಿ. ವಿಳಂಬಕ್ಕೆ ಅವಕಾಶವೇ ಇರುವುದಿಲ್ಲ. ಇದುವರೆಗೆ 432 ದಾವೆಗಳು ದಾಖಲಾಗಿವೆ. ಹಲವು ಇತ್ಯರ್ಥವಾಗಿವೆ ಎಂದು ತಿಳಿಸಿದರು. ಶ್ರೀಯುತರು ಮುಂದುವರೆದು ಮಾತನಾಡಿ, ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ದಾವೆ ದಾಖಲಾತಿಯ ಬಗ್ಗೆ ಚೆಕ್ ಲಿಸ್ಟ್ ಮಾಹಿತಿ ಇಲ್ಲ. ಕ್ರಮಬದ್ಧವಾಗಿ ದಾವೆಗಳನ್ನು ದಾಖಲು ಮಾಡಲು ಗೊತ್ತಿಲ್ಲ. ಹೀಗಾಗಿ ಈ ತರಬೇತಿ ಅತ್ಯಂತ ಮಹತ್ವದ್ದಾಗಿದೆ ಎಂದು ತಿಳಿಸಿದರು. ದಾವೆ ದಾಖಲಾತಿ ಕ್ರಮಬದ್ಧವಾಗಿದ್ದರೆ 3 ಹಿಯರಿಂಗ್‌ನಲ್ಲಿ ಅವಾರ್ಡ್ ಆಗುತ್ತದೆ ಎಂದು ತಿಳಿಸಿದರು. ಇದರಿಂದಾಗಿ ಸೌಹಾರ್ದ ಸಹಕಾರಿಗಳ ಸಾಲ ಮರುಪಾವತಿಗೆ ಹೆಚ್ಚು ಪ್ರಯೋಜನವಾಗುತ್ತದೆ ಎಂದು ತಿಳಿಸಿದರು. ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳು ಈ ನ್ಯಾಯಾಲಯಕ್ಕೆ ಇರುತ್ತವೆ ಎಂಬುದನ್ನು ಸಹ ಸೌಹಾರ್ದ ಸಹಕಾರಿಗಳು ತಿಳಿದುಕೊಳ್ಳಬೇಕು.

## ಸಂಯುಕ್ತ ಸಹಕಾರಿಗೆ ಪ್ರತ್ಯೇಕ ನ್ಯಾಯಾಲಯ ಒಂದು ಐತಿಹಾಸಿಕ ಸಾಧನೆ - ಶ್ರೀ ಗುರುನಾಥ ಜಾಂತಿಕರ



ಸಮಾರಂಭದ ಅಧ್ಯಕ್ಷತೆ ವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಸೌಹಾರ್ದ ಸಹಕಾರಿ ಕ್ಷೇತ್ರದ ನೇತಾರನಾಗಿ ಕಾರ್ಯನಿರ್ವಹಿಸುತ್ತಿರುವ ಸಂಯುಕ್ತ ಸಹಕಾರಿ ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಸೌಹಾರ್ದ ಸಹಕಾರಿಗಳಿಗೆ ಅನೇಕ ಅಭಿವೃದ್ಧಿಪರ ಚಟುವಟಿಕೆಗಳನ್ನು ಒದಗಿಸುವುದರ ಜೊತೆಗೆ ಅತ್ಯಂತ ಪರಿಣಾಮಕಾರಿ ಶಿಕ್ಷಣ ಹಾಗೂ ತರಬೇತಿಗಳನ್ನು ನೀಡುವುದರ ಜೊತೆಗೆ ಸೌಹಾರ್ದ ಸಹಕಾರಿಗಳಿಗೆ ಅವರು ನೀಡಿರುವ ಸಾಲಗಳ ವಸೂಲಾತಿಯ ವೇಗವನ್ನು ಹೆಚ್ಚಿಸುವ ದೃಷ್ಟಿಯಿಂದ ಮತ್ತು ಬಾಕಿ ಸಾಲಗಳ ವಸೂಲಾತಿಗೆ ಕ್ರಮವಿಡುವುದಕ್ಕಾಗಿ ಸಹಕಾರಿಗಳ ನಿಬಂಧಕರ ಕಛೇರಿಯಲ್ಲಿ ದಾವೆ ದಾಖಲು ಮಾಡುವ ಪ್ರಕ್ರಿಯೆಗೆ ಆಗುವ ವಿಳಂಬ ಹಾಗೂ ಪ್ರಕರಣಗಳು ವಿಳಂಬವಾಗುವುದನ್ನು ತಪ್ಪಿಸಲು ಸೌಹಾರ್ದ ಸಹಕಾರಿಗಳಿಗಾಗಿ ಒಂದು ಪ್ರತ್ಯೇಕ ನ್ಯಾಯಾಲಯವನ್ನು ಮಂಜೂರು ಮಾಡುವಂತೆ ಕರ್ನಾಟಕ ಸರಕಾರವನ್ನು ವಿನಂತಿಸಲಾಯಿತು. ಸರಕಾರ ನಮ್ಮ ಆಡಳಿತ ಮಂಡಲಿಯ ಮನವಿಯನ್ನು ಪುರಸ್ಕರಿಸಿದೆ. ನ್ಯಾಯಾಲಯ ಮಂಜೂರಾಗಿದೆ. ಕಾರ್ಯನಿರ್ವಹಿಸುತ್ತಿದೆ.

ಎಲ್ಲರ ಸಹಕಾರದಿಂದ ಈ ಐತಿಹಾಸಿಕ ಸಾಧನೆ ಆಗಿದೆ. ಈ ನ್ಯಾಯಾಲಯದ ಕಾರ್ಯವೂ ಸಹ ಬೇರೆ ನ್ಯಾಯಾಲಯಗಳಿಗಿಂತ ಉತ್ತಮವಾಗಿ ಕಾರ್ಯ ನಿರ್ವಹಿಸುವಂತಾಗಬೇಕು. ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಇದರ ಪ್ರಯೋಜನ ಪಡೆಯಬೇಕು ಎಂದರು. ಸಂಯುಕ್ತ ಸಹಕಾರಿಯ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಿರ್ದೇಶಕರಾದ ಶ್ರೀ ರಮೇಶರವರು ಸ್ವಾಗತಿಸಿದರು. ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ಬೆಂಗಳೂರು ನಗರ ಜಿಲ್ಲೆಯ ನಿರ್ದೇಶಕರಾದ ಶ್ರೀಮತಿ ಹೆಚ್.ಸಿ.ನಾಗರತ್ನರವರು ವಂದಿಸಿದರು. ವೇದಿಕೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ (ನಿವೃತ್ತ) ಶ್ರೀ ಎಸ್.ಎಸ್.ಕಟಗೇರಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 89 ಸೌಹಾರ್ದ ಸಹಕಾರಿಗಳಿಂದ 119 ಪ್ರತಿನಿಧಿಗಳು ಭಾಗವಹಿಸಿ, ಪ್ರಯೋಜನ ಪಡೆದರು.

ಬೆಳಗಿನ ಅಧಿವೇಶನದಲ್ಲಿ ಶ್ರೀ ಎಸ್.ಎಸ್.ಕಟಗೇರಿಯವರು "ವಿವಾದಗಳು, ವಿವಾದಗಳ ಇತ್ಯರ್ಥದ ವಿಧಾನ, ದಾವೆ, ದಾವಾ ದಾಖಲಾತಿ ಮತ್ತು ದಾಖಲೆಗಳ ನಿರ್ವಹಣೆ, ಸೌಹಾರ್ದ ಸಹಕಾರಿ ಮುಖ್ಯ ಕಾರ್ಯನಿರ್ವಾಹಕರ ಜವಾಬ್ದಾರಿಗಳು", ಮಧ್ಯಾಹ್ನದ ಅವಧಿಯಲ್ಲಿ "ದಾವಾ ದಾಖಲಾತಿ ವಿಧಾನಗಳ" ಬಗ್ಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ (ನಿವೃತ್ತ) ಶ್ರೀ ಸುಂದರಪ್ಪ ಹಾಗೂ ಕೇಂದ್ರದಲ್ಲಿ ಮಂಡನೆಯಾಗಿರುವ ವಿಧೇಯಕ "ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಮತ್ತು ಠೇವಣಿದಾರರ ಹಿತರಕ್ಷಣಾ ಮಸೂದೆ, 2015"ರ ಬಗ್ಗೆ ಸಂಯುಕ್ತ ಸಹಕಾರಿಯ ಕಾನೂನು ವಿಭಾಗದ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆರವರು ಉಪನ್ಯಾಸ ನೀಡಿದರು. ಕಾರ್ಯಕ್ರಮ ಬಹಳ ಪ್ರಯೋಜನಕಾರಿಯಾಗಿತ್ತೆಂದು ಪ್ರತಿನಿಧಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

## ಸಾಲ ವಸೂಲಾತಿ ಹಾಗೂ ದಾವಾ ದಾಖಲಾತಿಯ ವಿಧಾನ ತರಬೇತಿಯ ಕಾರ್ಯಕ್ರಮ

### ಬೆಳಗಾವಿ ವಿಭಾಗ – ಸಹಕಾರಿಗಳ ವ್ಯವಹಾರಗಳ ಬೆಳವಣಿಗೆಗೆ ಉತ್ತಮ ಸಾಲ ವಸೂಲಾತಿಯ ಅವಶ್ಯಕ

**ವಿಜಯಪುರ :** ವಿಜಯಪುರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ದಿನಾಂಕ : 06.09.2016ರಂದು "ಸಾಲ ವಸೂಲಾತಿ ಹಾಗೂ ದಾವಾ ದಾಖಲಾತಿಯ ವಿಧಾನ" ತರಬೇತಿಯ ಕಾರ್ಯಕ್ರಮವನ್ನು ವಿಜಯಪುರದ ಹೋಟಲ್ ಶುಭಶ್ರೀ ಸಾಗರ ಸಭಾಗೃಹದಲ್ಲಿ ಏರ್ಪಡಿಸಲಾಗಿತ್ತು.

ತರಬೇತಿಯನ್ನು ಉದ್ಘಾಟಿಸಿ, ಮಾತನಾಡಿದ ಬಸವಶ್ರೀ ಸೌಹಾರ್ದ ಸಹಕಾರಿ ನಿ., ವಿಜಯಪುರದ ಅಧ್ಯಕ್ಷರಾದ ಶ್ರೀ ಸಂಗಮೇಶ ಬಬಲೇಶ್ವರರವರು ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಸಹಕಾರಿಯ ಜವಾಬ್ದಾರಿಯುತ ವ್ಯಕ್ತಿಯಾಗಿದ್ದು, ಗ್ರಾಹಕರ ಜೊತೆಗೆ ಉತ್ತಮ ಸಂಬಂಧವನ್ನು ಬೆಳೆಸಿಕೊಳ್ಳಬೇಕು. ಅದಲ್ಲದೇ, ಗ್ರಾಹಕರಿಗೆ ನೀಡುವ ಸಾಲಗಳಿಗೆ ಸರಿಯಾದ ದಾಖಲಾತಿಗಳನ್ನು ತೆಗೆದುಕೊಂಡು ಅವುಗಳನ್ನು ಪರಿಶೀಲಿಸಿ, ನಂತರ ಮಂಜೂರು ಮಾಡಬೇಕು.ಮಂಜೂರು ಮಾಡಿದ ಸಾಲಗಳ ವಸೂಲಿಯು ಬಹಳ ಅವಶ್ಯಕತೆ ಇದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ಸಾಲ ವಸೂಲಾತಿ ಹಾಗೂ ದಾವಾ ದಾಖಲಾತಿ ವಿಧಾನವು ಸಹಕಾರಿಗಳ ವ್ಯವಹಾರದಲ್ಲಿ ಅತೀ ಅವಶ್ಯವಾಗಿದ್ದು, ಸಾಲ ನೀಡುವಿಕೆ ವಿಷಯದಲ್ಲಿ ಬಹಳ ಜಾಗರೂಕತೆಯಿಂದ ಸಾಲಗಳನ್ನು ಮಂಜೂರು ಮಾಡಬೇಕು.



ಅಲ್ಲದೇ, ಗ್ರಾಹಕರ ಆರ್ಥಿಕ ಸ್ಥಿತಿಗತಿಗಳನ್ನು ಪರಿಶೀಲಿಸಿ, ಸಾಲ ಮಂಜೂರು ಮಾಡಿದ್ದಲ್ಲಿ ಸಾಲಗಳ ವಸೂಲಿಯು ತುಂಬ ಸುಲಭವಾಗುತ್ತದೆ ಎಂದರು. ಸಿಂಡಿಕೇಡ ಸೌಹಾರ್ದ ಸಹಕಾರಿ ನಿ., ವಿಜಯಪುರದ ಅಧ್ಯಕ್ಷರಾದ ಶ್ರೀ ಅಮರನಾಥ ಬೀರದ ಹಾಗೂ ಉಪನ್ಯಾಸಕರಾದ ಶ್ರೀ ಎ.ಬಿ. ಬಂಕಪುರೆ, ನಿವೃತ್ತ ಸಹಾಯಕ ನಿಬಂಧಕರು ಇವರುಗಳು ಉಪಸ್ಥಿತರಿದ್ದರು. ಈ ತರಬೇತಿಯಲ್ಲಿ 78 ಸಹಕಾರಿಗಳಿಂದ 86 ಪ್ರತಿನಿಧಿಗಳು ಭಾಗವಹಿಸಿದ್ದರು.



ಕಲಬುರಗಿ ವಿಭಾಗ – **ಗಂಗಾವತಿ :** ದಿನಾಂಕ 12.09.2016ರಂದು "ಸಾಲ ವಸೂಲಾತಿ ಹಾಗೂ ದಾವಾ ದಾಖಲಾತಿಯ ವಿಧಾನಗಳ" ಕುರಿತು ತರಬೇತಿಯನ್ನು ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ಶ್ರೀ ಸಾಯಿ ಲಕ್ಷ್ಮೀ ರೆಸಿಡೆನ್ಸಿ, ಗಂಗಾವತಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಾಗಾರವನ್ನು ಶ್ರೀ ಗುರುನಾಥ ಜಾಂತಿಕರ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ ಬೆಂಗಳೂರು ಇವರು ಉದ್ಘಾಟಿಸಿದರು. ಶ್ರೀ ಕೆ.ಸಣ್ಣಸೂಗಪ್ಪ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ. ಬೆಂಗಳೂರು ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಎಸ್.ಎಸ್.ಕಟಗೇರಿ ಹಾಗೂ ಶ್ರೀ ಬಿ.ವಿ.ರವೀಂದ್ರನಾಥ ಇವರುಗಳು ತರಬೇತಿಯಲ್ಲಿ ಉಪನ್ಯಾಸಕರಾಗಿ ಭಾಗವಹಿಸಿದ್ದರು. ಈ ತರಬೇತಿಯಲ್ಲಿ ಕೊಪ್ಪಳ ಜಿಲ್ಲೆಯ 82 ಸೌಹಾರ್ದ ಸಹಕಾರಿಗಳಿಂದ 121 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿ, ಪ್ರಯೋಜನವನ್ನು ಪಡೆದುಕೊಂಡರು.

## ದಾವಾ ಪಂಚಾಯಿತಿ ನ್ಯಾಯಾಲಯ:

### ಸಹಕಾರ ಸಂಘಗಳ ಸಹಾಯಕ ನಿಬಂಧಕರ ಹುದ್ದೆಗೆ ಶ್ರೀ ಎಂ.ಪಿ. ಮಂಜುನಾಥ್ ನೇಮಕ



ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಆದೇಶ ಸಂಖ್ಯೆ ಸಿಬ್ಬಂದಿ / 13 / ಇಜಿಪಿ / 2016–17 ದಿನಾಂಕ : 02.09.2016ರಂತೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ನಿಯಮ, 441 ಇದರ ದಾವಾ ಪಂಚಾಯಿತಿ ನ್ಯಾಯಾಲಯದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಹುದ್ದೆಗೆ ಶ್ರೀ ಎಂ.ಪಿ. ಮಂಜುನಾಥ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು (ಲೇವಾದೇವಿ), ಕೇಂದ್ರ ಕಛೇರಿ, ಬೆಂಗಳೂರು ಇವರನ್ನು ಅಧಿಕ ಪ್ರಭಾರದಲ್ಲಿ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಆಡಳಿತಾತ್ಮಕ ಹಿತದೃಷ್ಟಿಯಿಂದ ನೇಮಕ ಮಾಡಿ, ಆದೇಶ ಹೊರಡಿಸಲಾಗಿದೆ.

**ಅಮಲ್ಜಾರಿ ವಿಭಾಗದ ಅಧಿಕಾರಿಗಳು :**

ಶ್ರೀ ಎಂ.ಪಿ. ಮಂಜುನಾಥ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೊಬೈಲ್ ಸಂಖ್ಯೆ : 9449442773

ಶ್ರೀ ಶಿವಕಾಂತ್, ಮೊಬೈಲ್ ಸಂಖ್ಯೆ : 8197258938

ಕುಮಾರಿ ಶೈಲಜಾ ಎಸ್, ಮೊಬೈಲ್ ಸಂಖ್ಯೆ : 9945254306

**ದಾವಾ ಪಂಚಾಯಿತಿ ನ್ಯಾಯಾಲಯದಲ್ಲಿ ಇದುವರೆಗೆ ಬೆಳಗಾವಿ ವಿಭಾಗದಿಂದ 485, ಬೆಂಗಳೂರು ವಿಭಾಗದಿಂದ 120 ಹಾಗೂ ಕಲಬುರಗಿ ವಿಭಾಗದಿಂದ 05 ಸೇರಿದಂತೆ ಒಟ್ಟು 610 ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 09 ಪ್ರಕರಣಗಳು ಇತ್ಯರ್ಥಗೊಂಡಿವೆ.**

## ಸಂಯುಕ್ತ ಸಹಕಾರಿಯ ಮುಂಬರುವ ಕಾರ್ಯಕ್ರಮಗಳು

- **ಯುವಕರು ಹಾಗೂ ಸಹಕಾರ ಕುರಿತಾದ ಸಂವಾದ ಕಾರ್ಯಕ್ರಮ :** ದಿನಾಂಕ : 19–10–2016, ಸ್ಥಳ : ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ.
- **ಮಾಧ್ಯಮ ಹಾಗೂ ಸಹಕಾರ ಕುರಿತು ವಿಚಾರ ಸಂಕಿರಣ :** ದಿನಾಂಕ : 25.10.2016, ಸ್ಥಳ : ಕಲುಬುರಗಿ ಜಿಲ್ಲೆ.
- **ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನದ 16ನೇ ತಂಡದ ತರಬೇತಿ ಕಾರ್ಯಕ್ರಮ :** ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಸಂಯುಕ್ತ ಸಹಕಾರಿಯು ಕಳೆದ 8 ವರ್ಷಗಳಿಂದ ಪ್ರತಿ 6 ತಿಂಗಳಿಗೊಮ್ಮೆ ಏರ್ಪಡಿಸುತ್ತಿರುವ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದ 16ನೇ ತಂಡವನ್ನು 15 ಡಿಸೆಂಬರ್ 2016 ರಿಂದ 24 ಡಿಸೆಂಬರ್ 2016ರವರೆಗೆ ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ. ಸೌಹಾರ್ದ ಸಹಕಾರಿಗಳು ತಮ್ಮ ಸಂಸ್ಥೆಯ ಸಿಬ್ಬಂದಿಯವರನ್ನು ಕಳುಹಿಸಿಕೊಡಲು ಕೋರಿದೆ. ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ. ಪ್ರತಿನಿಧಿ ಶುಲ್ಕ ತಲಾ ರೂ.5,000/– (ವಸತಿ ಮತ್ತು ಊಟೋಪಚಾರ) ಅಧ್ಯಯನ ಪ್ರವಾಸ, ಅಧ್ಯಯನ ಸಾಹಿತ್ಯ ಹಾಗೂ ತರಬೇತಿ ಕಾರ್ಯಕ್ರಮದ ಖರ್ಚು ವೆಚ್ಚಗಳನ್ನು ಸಂಯುಕ್ತ ಸಹಕಾರಿಯಿಂದ ಭರಿಸಲಾಗುವುದು. ಕಾರ್ಯಕ್ರಮಕ್ಕೆ ಬಂದು ಹೋಗುವ ಪ್ರಯಾಣ ವೆಚ್ಚವನ್ನು ಸಂಬಂಧಿಸಿದ ಸೌಹಾರ್ದ ಸಹಕಾರಿಗಳಿಂದ ಭರಿಸಬೇಕು. ನೋಂದಣಿಯ ಕೊನೆಯ ದಿನಾಂಕ : 30.11.2016.

  **ಕಾರ್ಯಕ್ರಮದ ವಿವರ :** ತರಬೇತಿಯ ಅವಧಿಯಲ್ಲಿ ಸಹಕಾರ ಕ್ಷೇತ್ರ, ಸೌಹಾರ್ದ ಸಹಕಾರಿ ಕ್ಷೇತ್ರ ಹಾಗೂ ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳು, ಕಛೇರಿ ಆಡಳಿತ ನಿರ್ವಹಣೆ, ಲೆಕ್ಕಪತ್ರಗಳ ನಿರ್ವಹಣೆ, ಹಣಕಾಸಿನ ನಿರ್ವಹಣೆ, ಸಾಲಪತ್ರಗಳ ನಿರ್ವಹಣೆ, ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ವಿಷಯಗಳು, ಆಂತರಿಕ ಸಂಬಂಧ ಹಾಗೂ ಗ್ರಾಹಕರ ಸೇವೆಗಳ ನಿರ್ವಹಣೆ, ಮಾನವೀಯ ಮೌಲ್ಯಗಳು ಮುಂತಾದ ವಿಷಯಗಳ ಬಗ್ಗೆ ತಿಳಿಸಿಕೊಡಲಾಗುವುದು. ಆರ್ಥಿಕ ತಃಖ್ತೆಗಳ ಸಿದ್ಧತೆ, ಸಭೆಯ ನೋಟೀಸ್, ಟಿಪ್ಪಣಿ ಹಾಗೂ ನಡವಳಿಗಳನ್ನು ಬರೆಯುವ ಬಗ್ಗೆ ಪ್ರಾಯೋಗಿಕ ನಡೆಸಿಕೊಡಲಾಗುತ್ತದೆ. ಅತ್ಯುತ್ತಮ ಸಹಕಾರ ಸಂಸ್ಥೆಗಳಿಗೆ ಅಧ್ಯಯನ ಪ್ರವಾಸ ಹಾಗೂ ಪ್ರೇಕ್ಷಣೀಯ ಸ್ಥಳಗಳ ಭೇಟಿಯನ್ನು ಆಯೋಜಿಸಲಾಗುತ್ತದೆ. ಬೆಳಿಗ್ಗೆ ಯೋಗಾಭ್ಯಾಸ, ಸಂಜೆ ಅನೌಪಚಾರಿಕ ಸಭೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಆರೋಗ್ಯ ತಪಾಸಣೆಯನ್ನು ನಡೆಸಲಾಗುತ್ತದೆ.

## ISOನಿಂದ ಸಂಯುಕ್ತ ಸಹಕಾರಿಗೆ "ಗ್ರಾಹಕರ ತೃಪ್ತಿ ಹಾಗೂ ದೂರುಗಳ ನಿರ್ವಹಣೆ" ಪ್ರಮಾಣ ಪತ್ರ



ಅಂತರರಾಷ್ಟ್ರೀಯ ಗುಣಮಟ್ಟ ನಿರ್ವಹಣಾ ಸಂಸ್ಥೆ (ISO)ಯವರು ಸಂಯುಕ್ತ ಸಹಕಾರಿಯಲ್ಲಿ "ಗ್ರಾಹಕರ ತೃಪ್ತಿ ಹಾಗೂ ದೂರುಗಳ ನಿರ್ವಹಣೆ" (Consumer Satisfaction and Complaint Management)ಗೆ ಸಂಬಂಧಿಸಿದಂತೆ ಪರಿಶೀಲನೆ ನಡೆಸಿ, ISO 10002–2014 ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಸದರಿ ಪ್ರಮಾಣ ಪತ್ರವನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ ISO ಸಂಸ್ಥೆಯ ಅಧಿಕಾರಿಗಳು ವ್ಯವಸ್ಥಾಪಕ ನಿರ್ದೇಶಕರಿಗೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಸಾಮಾನ್ಯ ಸಭೆಯ ನಡವಳಿಗಳ ಕಳುಹಿಸುವಿಕೆಗೆ ಸಂಬಂಧಿಸಿದಂತೆ ಸ್ಪಷ್ಟನೆ

ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಕಳುಹಿಸಲಾಗಿದ್ದ ವರ್ಷಾಂತ್ಯದ ಆರ್ಥಿಕ/ ಇತರೆ ಮಾಹಿತಿ ಕಳುಹಿಸುವ ಹಾಗೂ ಇತರೆ ಸಂಗತಿಗಳ ಕುರಿತಂತೆ ಸುತ್ತೋಲೆ ಸಂಖ್ಯೆ ಕರಾಸೌಸಂಸನಿ/ಸುತ್ತೋಲೆ/ಆ–1/2016–17 ದಿನಾಂಕ 28.04.2016ರ ಸುತ್ತೋಲೆಯಲ್ಲಿ ವಿಷಯ ಸಂಖ್ಯೆ 4 (ಏ) ರಲ್ಲಿ ಕಣ್ತಪ್ಪಿನಿಂದಾಗಿ ಸೌಹಾರ್ದ ಸಹಕಾರಿಗಳು ಸಾಮಾನ್ಯ ಸಭೆಯ ನಡವಳಿಗಳನ್ನು ಸಂಯುಕ್ತ ಸಹಕಾರಿಗೆ, ತಮ್ಮ ರಿಜಿಸ್ಟ್ರಾರರಿಗೆ ಹಾಗೂ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಕಳುಹಿಸಬೇಕೆಂದು ಇರುತ್ತದೆ. ಆದರೆ, ಸೌಹಾರ್ದ ಸಹಕಾರಿಗಳು ಸಾಮಾನ್ಯ ಸಭೆ ಮುಗಿದ 30 ದಿನಗಳಲ್ಲಿ ಸಭೆಯ ನಡವಳಿಗಳನ್ನು ಸಂಯುಕ್ತ ಸಹಕಾರಿಗೆ ಹಾಗೂ ತಮ್ಮ ರಿಜಿಸ್ಟ್ರಾರರಿಗೆ ಮಾತ್ರ ಕಳುಹಿಸಬೇಕೆಂದು ಈ ಮೂಲಕ ಸ್ಪಷ್ಟೀಕರಿಸಿದೆ.



## ಶ್ರೀ ಎಸ್.ಗೋಪಿನಾಯ್ಕ್‌ರವರಿಗೆ ರಾಷ್ಟ್ರೀಯ ಪ್ರಶಸ್ತಿ

ಹಗರಿಬೊಮ್ಮನಹಳ್ಳಿಯ ಗಿರಿ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಗೋಪಿನಾಯ್ಕ್‌ರವರಿಗೆ ನವದೆಹಲಿಯ 'ಇಂಡಿಯನ್ ಆರ್ಗನೈಜೇಷನ್ ಫಾರ್ ಕಾಮರ್ಸ್ ಅಂಡ್ ಇಂಡಸ್ಟ್ರಿ' ವತಿಯಿಂದ ನಡೆದ ಸಮಾರಂಭದಲ್ಲಿ ಗ್ರಾಮೀಣ ಪರಿಸರದ ಆರ್ಥಿಕ ಬೆಳವಣಿಗೆ ಮತ್ತು ಸಾಮಾಜಿಕ ಜವಾಬ್ದಾರಿಯಲ್ಲಿ ವೈಯಕ್ತಿಕ ಕೊಡುಗೆಯನ್ನು ಪರಿಗಣಿಸಿ ರಾಷ್ಟ್ರೀಯ ಪ್ರಶಸ್ತಿಯನ್ನು ಕೇಂದ್ರ ಸಾಮಾಜಿಕ ನ್ಯಾಯ ಇಲಾಖೆ ಸಚಿವರಾದ ಶ್ರೀ ರಾಮದಾಸ ಅಟಾವಳಿರವರು ನೀಡಿ ಗೌರವಿಸಿದರು.

# ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಸತತ ಪ್ರಯತ್ನದ ಫಲ

**ನ್ಯಾಷನಲ್ ಕೋ-ಆಪರೇಟಿವ್ ಡೆವಲಪ್‌ಮೆಂಟ್ ಕೌನ್ಸಿಲ್ (N.C.D.C.) ಯಿಂದ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ಸಾಲ ಪಡೆಯುವ ಅವಕಾಶ - ಬೆಂಗಳೂರಿನ ಜ್ಞಾನಶಾಲಾ ಸೌಹಾರ್ದ ಸಹಕಾರಿಗೆ ಎನ್.ಸಿ.ಡಿ.ಸಿ. ಇಂದ 60 ಲಕ್ಷ ರೂ.ಗಳ ಸಾಲ ಮಂಜೂರು - ಶ್ರೀ ಶರಣಗೌಡ ಜಿ. ಪಾಟೀಲ**

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ತೃಪ್ತಿಕರವಾಗಿದೆ. 3818 ಸೌಹಾರ್ದ ಸಹಕಾರಿಗಳು, 974 ಇ–ಸ್ಟ್ಯಾಂಪಿಂಗ್ ಕೇಂದ್ರಗಳು, 35 ಲಕ್ಷ ಸದಸ್ಯರು, ರೂ.510 ಕೋಟಿ ಶೇರು ಬಂಡವಾಳ, ರೂ.11,000 ಕೋಟಿ ಠೇವಣಿಗಳು, ರೂ.850 ಕೋಟಿ ಕಾಯ್ದಿಟ್ಟ ನಿಧಿಗಳು, ರೂ.8250 ಕೋಟಿ ಸಾಲಗಳು, ರೂ.12,500 ಕೋಟಿ ದುಡಿಯುವ ಬಂಡವಾಳ, ಲಾಭ 210 ಕೋಟಿ, 50,000 ಜನರಿಗೆ ಉದ್ಯೋಗ ಇತ್ಯಾದಿ. ಹಲವಾರು ಸಂಸ್ಥೆಗಳು ನಿರೀಕ್ಷೆಗೂ ಮೀರಿ ಸಾಧನೆಯನ್ನು ಮಾಡಿವೆ. ರಾಜ್ಯದಲ್ಲಿ ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸುತ್ತಿವೆ.

ಆದರೂ ಸಹ ಕೆಲವು ಸೌಹಾರ್ದ ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರಿಗೆ ವಿವಿಧ ರೀತಿಯ ಸಾಲ ನೀಡಲು ತಮಗೆ ಹಣಕಾಸಿನ ನೆರವನ್ನು ಒದಗಿಸುವ ಬಗ್ಗೆ ಜಿಲ್ಲೆಯ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಹಾಗೂ ಸ್ಥಳೀಯ ವಾಣಿಜ್ಯ ಬ್ಯಾಂಕುಗಳನ್ನು ಸಂಪರ್ಕಿಸಿ, ಹಣಕಾಸಿನ ನೆರವನ್ನು ಪಡೆಯಲು ವಿಫಲತೆಯನ್ನು ಕಂಡು, ಸಂಯುಕ್ತ ಸಹಕಾರಿ ಜೊತೆಗೆ ತಮ್ಮ ಕಷ್ಟವನ್ನು ಹಂಚಿಕೊಂಡಿದ್ದವು. ಸಂಯುಕ್ತ ಸಹಕಾರಿ ರಾಜ್ಯದ ಸೌಹಾರ್ದ ಸಹಕಾರಿಗಳ ಆರ್ಥಿಕ ನೆರವಿನ ಅಗತ್ಯತೆಯನ್ನು ಮನಗಂಡು ಎನ್.ಸಿ.ಡಿ.ಸಿ., ನಬಾರ್ಡ್ ಮುಂತಾದ ರಾಷ್ಟ್ರಮಟ್ಟದ ಸಂಸ್ಥೆಗಳಿಗೆ ಭೇಟಿ ಕೊಟ್ಟು, ರಾಜ್ಯದ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿ, ಅವುಗಳಿಗೆ ಹಣಕಾಸಿನ ನೆರವನ್ನು ನೀಡುವಂತೆ ಹಲವು ಬಾರಿ ಮನವಿ ಸಲ್ಲಿಸಲಾಗಿತ್ತು ಹಾಗೂ ಎನ್.ಸಿ.ಡಿ.ಸಿ.ಯ ಅಧಿಕಾರಿಗಳನ್ನು ನಿರಂತರವಾಗಿ ಸಂಪರ್ಕಿಸಲಾಗುತ್ತಿತ್ತು.

ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಸತತ ಪ್ರಯತ್ನದ ಫಲವಾಗಿ ರಾಜ್ಯದ ಸೌಹಾರ್ದ ಸಹಕಾರಿಗಳು ಇನ್ನು ಹಣಕಾಸಿನ ನೆರವಿನ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲ. ಎನ್.ಸಿ.ಡಿ.ಸಿ.ಯವರು ಸೌಹಾರ್ದ ಸಹಕಾರಿಗಳಿಗೆ ಹಣಕಾಸಿನ ನೆರವು ನೀಡಲು ಒಪ್ಪಿ ಬೆಂಗಳೂರಿನ ಜ್ಞಾನಶಾಲಾ ಸೌಹಾರ್ದ ಸಹಕಾರಿಗೆ 60 ಲಕ್ಷ ರೂ.ಗಳ ಹಣಕಾಸಿನ ನೆರವು ನೀಡುವುದರ ಮೂಲಕ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಈ ಪ್ರಯೋಜನವನ್ನು ಪಡೆಯಲು ಅವಕಾಶವಿದೆ ಎಂಬುದನ್ನು ಕಾರ್ಯಗತ ಮಾಡಿದ್ದಾರೆ. ಎಲ್ಲಾ ಸೌಹಾರ್ದ ಸಹಕಾರಿಗಳಿಗೂ ಮುಕ್ತ ಅವಕಾಶ ಒದಗಿಸಿದ್ದಾರೆ.

### ಸಾಲ ಪಡೆಯುವ ವಿಧಾನ

1. ಎನ್‌ಸಿಡಿಸಿಯಿಂದ ಹಣಕಾಸಿನ ನೆರವನ್ನು ಅಪೇಕ್ಷಿಸುವ ರಾಜ್ಯದ ಸೌಹಾರ್ದ ಸಹಕಾರಿಗಳು ಬೆಂಗಳೂರಿನಲ್ಲಿರುವ ರೀಜನಲ್ ಡೈರೆಕ್ಟರ್, ಎನ್.ಸಿ.ಡಿ.ಸಿ. ರೀಜನಲ್ ಆಫೀಸ್, ನ್ಯಾಷನಲ್ ಗೇಮ್ಸ್ ವಿಲೇಜ್, ಕರ್ನಾಟಕ ಹೌಸಿಂಗ್ ಬೋರ್ಡ್ ಕಾಂಪ್ಲೆಕ್ಸ್, ಕೋರಮಂಗಲ, ಬೆಂಗಳೂರು ಇವರಿಗೆ ತಮ್ಮ ಪ್ರಸ್ತಾವನೆ ಅರ್ಜಿಯನ್ನು ಸಲ್ಲಿಸಬೇಕು.
2. ಇ–ಮೇಲ್ ಮೂಲಕವೂ ಪ್ರಸ್ತಾವನೆಯನ್ನು ಸಲ್ಲಿಸಲು ಅವಕಾಶವಿದೆ.
   e–mail address - robangalore@ncdc.in
3. ಸಂಪರ್ಕಿಸುವ ಅಧಿಕಾರಿ ಶ್ರೀ ಸುಬ್ರಮಣ್ಯಮ್ : ದೂರವಾಣಿ ಸಂಖ್ಯೆ – ಕಛೇರಿ 080–25702112, 080–25701860. ಮೊಬೈಲ್ : 9980116647
4. ರೀಜನಲ್ ಡೈರೆಕ್ಟರ್ ಶ್ರೀ ಚನ್ನೇಶಪ್ಪ
5. **ಪ್ರಸ್ತಾವನೆಯಲ್ಲಿ ಸಾಲದ ಉದ್ದೇಶ** : ದುಡಿಯುವ ಬಂಡವಾಳಕ್ಕಾಗಿ, ಸ್ವಸಹಾಯ ಗುಂಪುಗಳಿಗೆ ಆರ್ಥಿಕ ನೆರವು ನೀಡುವುದಕ್ಕಾಗಿ, ಕಟ್ಟಡ ಕಟ್ಟುವುದಕ್ಕೆ, ಕಛೇರಿಯ ಒಳಾಂಗಣ ವಿನ್ಯಾಸ ಮಾಡಿಸಿ ಕ್ರಮವಿಡುವುದಕ್ಕೆ, ಇನ್‌ಫ್ರಾಸ್ಟ್ರಕ್ಚರ್ ವ್ಯವಸ್ಥೆಗಳಿಗೆ, ಪ್ರಾಸೆಸಿಂಗ್ ಯೂನಿಟ್ ಸ್ಥಾಪಿಸುವುದಕ್ಕೆ, ಹಾಲಿನಿಂದ ತಯಾರಿಸುವ ವಸ್ತುಗಳ ಘಟಕಗಳ ಸ್ಥಾಪನೆ, ಹಾಲಿ ಕಾರ್ಯ ನಿರ್ವಹಿಸುತ್ತಿರುವ ಘಟಕಗಳ ಖರೀದಿಗೆ ಹಾಗೂ ಸದಸ್ಯರಿಗೆ ಚಿನ್ನಾಭರಣ ಸಾಲ ಇತ್ಯಾದಿ ವಿವರಗಳನ್ನು ನಮೂದಿಸಬೇಕು.
6. ಸಾಲಕ್ಕೆ ಸೆಕ್ಯುರಿಟಿಯಾಗಿ ಸಂಘದ ಕಟ್ಟಡ, ನಿವೇಶನ, ಬ್ಯಾಂಕ್ ಠೇವಣಿಗಳು, ಅಗತ್ಯ ಸೆಕ್ಯೂರಿಟಿಗಳ ಬಗ್ಗೆ ನಮೂದಿಸಬೇಕು.
7. ಸೆಕ್ಯೂರಿಟಿಯ ಮಾರ್ಕೆಟ್ ಬೆಲೆಯ 75%ರಷ್ಟು ಸಾಲವನ್ನು ಎನ್.ಸಿ.ಡಿ.ಸಿ. ಮಂಜೂರು ಮಾಡುತ್ತದೆ.
8. ಆಡಳಿತ ಮಂಡಲಿ ಸಭೆಯ ನಿರ್ಣಯದ ಪ್ರತಿ ಲಗತ್ತಿಸಬೇಕು.
9. 3 ವರ್ಷದ ಲೆಕ್ಕ ಪರಿಶೋಧನಾ ವರದಿಯ ಪ್ರತಿಗಳನ್ನು ಲಗತ್ತಿಸಬೇಕು.
10. ಸಹಕಾರಿಯ ನಿರ್ದೇಶಕರ ಪಟ್ಟಿಯನ್ನು ಲಗತ್ತಿಸಬೇಕು.
11. ಸಹಕಾರಿಯ ಲೆಕ್ಕಪರಿಶೋಧಕರ ಅಭಿಪ್ರಾಯ ಪಡೆಯಬೇಕು.
12. 3 ವರ್ಷಗಳ ಬ್ಯಾಂಕ್ ವ್ಯವಹಾರಗಳ ಪಟ್ಟಿಯನ್ನು ಲಗತ್ತಿಸಬೇಕು.
13. ಇದಾದ ನಂತರ ಎನ್.ಸಿ.ಡಿ.ಸಿ.ಯವರು ಲಾಭ–ನಷ್ಟ ಖಾತೆಯ (ಪ್ರಾಫಿಟ್ & ಲಾಸ್ ಅನಲೀಸಸ್ ಫಾರ್ಮ್) ಪರಿಶೀಲನಾ ಮಾದರಿ ಫಾರ್ಮ್ ಕಳುಹಿಸುತ್ತಾರೆ.
14. ಸಂಸ್ಥೆಯ ಪರವಾಗಿ ಅಧಿಕೃತ ಸಹಿ ಮಾಡುವ ಅಧಿಕಾರಿಯ ಬಗ್ಗೆ ಮಾಹಿತಿ ಕೇಳುತ್ತಾರೆ.
15. ಸಾಲದ ಅಗ್ರಿಮೆಂಟ್ ಮಾದರಿ ಕಳುಹಿಸುತ್ತಾರೆ. ಅದರಲ್ಲಿ ಸಾಲದ ಶೇಕಡಾ ಬಡ್ಡಿ ದರ ಹಾಗೂ ಒಂದೇ ಬಾರಿಗೆ ಪ್ರಾಸೆಸಿಂಗ್ ಫೀ ಹಾಗೂ ವಕೀಲರ ಫೀ ವಿವರಗಳನ್ನು ಸಹ ನಮೂದಿಸಿರುತ್ತಾರೆ.
16. ಸಾಲಕ್ಕೆ ಸೆಕ್ಯುರಿಟಿಯಾಗಿಡುವ ಡಾಕ್ಯುಮೆಂಟ್ ಕಳುಹಿಸಬೇಕು.
17. ಎಸ್.ಬಿ.ಐ. ಅಧಿಕಾರಿಗಳು ಬರುತ್ತಾರೆ. ಡಾಕ್ಯುಮೆಂಟ್‌ಗಳ ಪರಿಶೀಲನೆ ಯಾಗುತ್ತದೆ.
18. ಸೆಕ್ಯುರಿಟಿ ಎನ್.ಸಿ.ಡಿ.ಸಿ. ಹೆಸರಿಗೆ ನೋಂದಣೆಯಾಗಬೇಕು. ಈ ಜವಾಬ್ಧಾರಿಯನ್ನು ಎನ್.ಸಿ.ಡಿ.ಸಿ.ಯವರು ನಿರ್ವಹಿಸುತ್ತಾರೆ.
19. ಹಣ ಬಿಡುಗಡೆಯಾಗುತ್ತದೆ.
20. ಸಾಲದ ಅವಧಿ 5 ವರ್ಷಗಳು.

## ಎನ್.ಸಿ.ಡಿ.ಸಿ.ಯಿಂದ ಸಾಲ ಪಡೆದ ಬೆಂಗಳೂರಿನ ಜ್ಞಾನಶಾಲೆ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ನಿಯಮಿತ ಇದರ ಪ್ರಗತಿಯ ಪಕ್ಷಿನೋಟ



ಶ್ರೀ ಶ್ರೀಧರ್
ಸಂಸ್ಥಾಪಕ ಅಧ್ಯಕ್ಷರು

ಬೆಂಗಳೂರಿನ ಸಂಜಯನಗರದಲ್ಲಿ ದಿನಾಂಕ 27.12.2010ರಂದು ಸ್ಥಾಪನೆಯಾಗಿ ಪ್ರಗತಿಪಥದಲ್ಲಿ ಮುಂದುವರೆಯುತ್ತಿರುವ ಜ್ಞಾನಶಾಲೆ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ನಿಯಮಿತವು ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಶ್ರೀಧರ ಇವರ ನೇತೃತ್ವದಲ್ಲಿ ಹಲವು ಸಮಾನ ಮನಸ್ಕ ಪ್ರಗತಿಪರ ಚಿಂತಕರ ಕನಸಿನ ಕೂಸು. ಕೇವಲ 6 ವರ್ಷಗಳ ಅವಧಿಯಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿ, ಕೇಂದ್ರ ಕಛೇರಿಯನ್ನು ಹಾಗೂ 4 ಶಾಖೆಗಳನ್ನು ಹೊಂದಿದೆ. ಸದಸ್ಯರಿಗೆ ಚಿನ್ನಾಭರಣ ಸಾಲ, ಶೈಕ್ಷಣಿಕ ಸಾಲ, ವಾಹನ ಸಾಲ, ನಿವೇಶನ ಖರೀದಿ ಸಾಲ, ವಸ್ತುಗಳ ಆಧಾರ ಸಾಲ ಇತ್ಯಾದಿ ಸಾಲಗಳನ್ನು ನೀಡುತ್ತಿದೆ. ಈ ಸಹಕಾರಿಯಲ್ಲಿ 1050 ಸದಸ್ಯರು, ಶೇರು ಬಂಡವಾಳ 39.51 ಲಕ್ಷ, ಠೇವಣಿ ಹಾಗೂ ನಿಧಿಗಳು 13.68 ಕೋಟಿ, ಸಾಲ ಮತ್ತು ಮುಂಗಡಗಳು 12.40 ಕೋಟಿ, ಪ್ರಸಕ್ತ ಸಾಲಿನ ಲಾಭ 65.00 ಲಕ್ಷ ಹೊಂದಿದ್ದು, ಪ್ರಸಕ್ತ ಸಾಲಿನಲ್ಲಿ ಡಿವಿಡೆಂಡ್ 14% ವಿತರಿಸಿದೆ.

## ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ವತಿಯಿಂದ ಆರೋಗ್ಯ ಮಾಹಿತಿ ಕಾರ್ಯಾಗಾರ




ದಿನಾಂಕ : 06.09.2016ರಂದು ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು ಸಹಕಾರಿಯ ಸಹ ಸಂಸ್ಥೆಯಾದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ವತಿಯಿಂದ ಮಹಿಳಾ ಸಬಲೀಕರಣ ಮತ್ತು ಕೌಶಲ್ಯಾಭಿವೃದ್ಧಿ ಯೋಜನೆಯಡಿ ಸಂಸದರ ಆದರ್ಶ ಗ್ರಾಮ ವ್ಯಾಪ್ತಿಗೆ ಬರುವ ಕೇನ್ಯದ ಪೇರಳಕಟೆಯಲ್ಲಿ ನಡೆಯುತ್ತಿರುವ 6 ತಿಂಗಳ ಉಚಿತ ಹೊಲಿಗೆ ತರಬೇತಿ ಶಿಬಿರದಲ್ಲಿ ಆರೋಗ್ಯ ಮಾಹಿತಿ ಕಾರ್ಯಾಗಾರವನ್ನು ನಡೆಸಲಾಯಿತು.

ಈ ಕಾರ್ಯಾಗಾರವನ್ನು ಬಳ್ಪ ಗ್ರಾಮ ಪಂಚಾಯತ್‌ನ ಉಪಾಧ್ಯಕ್ಷರಾದ ಶ್ರೀಮತಿ ತಾರ.ಬಿ.ರೈರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಟ್ರಸ್ಟ್‌ನ ಟ್ರಸ್ಟಿಗಳಾದ ಶ್ರೀ ಚಂದ್ರಶೇಖರ ಶೇರಾಮೆಯವರು ಆಗಮಿಸಿದ್ದರು. ಅಧ್ಯಕ್ಷತೆಯನ್ನು ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ವಿನಯ್ ಕುಮಾರ್ ಕಂದಡ್ಕರವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ಡಾ.ತ್ರಿಮೂರ್ತಿಯವರು ಪೌಷ್ಠಿಕ ಆಹಾರ ಮತ್ತು ಸಾಂಕ್ರಾಮಿಕ ರೋಗಗಳು ಎಂಬ ವಿಷಯದ ಬಗ್ಗೆ ಮಾಹಿತಿಯನ್ನು ನೀಡಿದರು.

## ಅಭಿನಂದನೆ



ಶ್ರೀ ಭುವನೇಶ್ವರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತದ ಅಧ್ಯಕ್ಷರಾದ ಶ್ರೀ ವಿರೂಪಾಕ್ಷಪ್ಪ ಮುಷ್ಠಿರವರು ಆರ್.ಡಿ.ಸಿ.ಸಿ ಬ್ಯಾಂಕ್‌ನ ನಿರ್ದೇಶಕರಾಗಿ ಆಯ್ಕೆಗೊಂಡ ಹಿನ್ನೆಲೆಯಲ್ಲಿ ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಅಭಿನಂದಿಸಿದರು.




**ಶಿಕ್ಷಕರ ದಿನಾಚರಣೆ :** ಮಂಗಳೂರು ಸೌಹಾರ್ದ ಸಹಕಾರಿ ಲಿ., ಮಂಗಳೂರು ಸಹಕಾರಿಯ ಆಶ್ರಯದಲ್ಲಿ ಶಿಕ್ಷಕರ ದಿನಾಚರಣೆಯನ್ನು ಶ್ರೀ ಕೆ.ಭಾಸ್ಕರ ರಾವ್‌ರವರ ಅಧ್ಯಕ್ಷತೆಯಲ್ಲಿ ಕಛೇರಿಯ ಆವರಣದಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ಘನ ಸರಕಾರದ ಶ್ರೀ ಐವನ್ ಡಿಸೋಜರವರು ಮಿಲಾಗ್ರಿಸ್ ಹೈಸ್ಕೂಲ್‌ನ ನಿವೃತ್ತ ಶಿಕ್ಷಕಿಯಾದ ಗೋದಾವರಿಯವರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಿದರು.




## ವಾರ್ಷಿಕ ಸಂವಾದ ಕಾರ್ಯಕ್ರಮ

**ಶಿವಮೊಗ್ಗ :** ದಿನಾಂಕ 11.09.2016ರಂದು ಮಯೂರ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ.,ನ ಶಿವಮೊಗ್ಗ ಶಾಖೆಯ 7ನೇ ವಾರ್ಷಿಕ 'ಸಂವಾದ' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ವೈ.ವಿ.ಗುಂಡೂರಾವ್‌ರವರು ಮಾತನಾಡಿ ಒಂದು ಸಹಕಾರ ಸಂಸ್ಥೆಗೆ ಷೇರುದಾರರು, ಆಡಳಿತ ಮಂಡಲಿ ಹಾಗೂ ಸಿಬ್ಬಂದಿಗಳೂ ಈ ಮೂರು ಆಧಾರ ಸ್ತಂಭಗಳಿದ್ದಂತೆ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಎಸ್.ವೆಂಕಟೇಶ್‌ರವರು ಮಾತನಾಡಿ ಪಾರದರ್ಶಕತೆ, ಪ್ರಾಮಾಣಿಕತೆ ಮತ್ತು ನಿಸ್ವಾರ್ಥತೆ ನಮ್ಮ ಸಹಕಾರಿಯ ಆಸ್ತಿ ಎಂದು ಉಲ್ಲೇಖಿಸಿದರು.

## ಶ್ರೀ ಭುವನೇಂದ್ರ ಸ್ವಾಮೀಜಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ : ಪುತ್ತೂರು ಶಾಖೆಯ ಉದ್ಘಾಟನೆ

**ಪುತ್ತೂರು:** ಶ್ರೀ ಭುವನೇಂದ್ರ ಸ್ವಾಮೀಜಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮಂಗಳೂರು ಸಹಕಾರಿಯ 2ನೇ ಶಾಖೆಯನ್ನು ಪುತ್ತೂರು ನಗರದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಸತೀಶ್ ನಾಯಕ್‌ರವರ ಅಧ್ಯಕ್ಷತೆಯಲ್ಲಿ, ಕ್ಯಾಂಪ್ಕೋ ಲಿಮಿಟೆಡ್‌ನ ಅಧ್ಯಕ್ಷರು, ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರು, ಸಂಯುಕ್ತ ಸಹಕಾರಿಯ ನಿರ್ದೇಶಕರು ಹಾಗೂ ಸಹಕಾರ ಭಾರತಿ, ಕರ್ನಾಟಕ ಇದರ ಸಂಚಾಲಕರಾಗಿರುವ ಶ್ರೀ ಎಸ್.ಆರ್.ಸತೀಶ್‌ಚಂದ್ರರವರು ಉದ್ಘಾಟಿಸಿದರು.



## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಬಿಸಿ ರೋಡ್ ಶಾಖೆಯ ನವೀಕೃತ ಕಛೇರಿಯ ಉದ್ಘಾಟನೆ



**ಬಂಟ್ವಾಳ :** ದಿನಾಂಕ 12.09.2016ರಂದು ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,ದ ಬಿ ಸಿ ರೋಡ್ ಶಾಖೆಯ ನವೀಕೃತ ಹವಾ ನಿಯಂತ್ರಿತ ಕಛೇರಿಯನ್ನು ಬಿ ಸಿ ರೋಡ್‌ನ ಪದ್ಮ ಕಾಂಪ್ಲೆಕ್ಸ್ ತಳಮಹಡಿಯಲ್ಲಿ ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿರುವ ಡಾ। ಪ್ರಭಾಕರ ಭಟ್‌ರವರು ಉದ್ಘಾಟಿಸಿದರು. ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶ್ಚಂದ್ರ, ಭೂ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಸುದರ್ಶನ್ ಜೈನ್, ಕಲ್ಲಡ್ಕ ರೈತ ಸೇವಾ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಕೆ ಪದ್ಮನಾಭ ಕೊಟ್ಟಾರಿ, ಬಂಟ್ವಾಳ ಪುರಸಭಾ ಅಧ್ಯಕ್ಷರಾದ ಶ್ರೀ ಪಿ ರಾಮಕೃಷ್ಣ ಆಳ್ವ, ಪದ್ಮ ಕಾಂಪ್ಲೆಕ್ಸ್ ಮಾಲೀಕರಾದ ಶ್ರೀ ಸತೀಶ್ ರಾವ್, ಶ್ರೀ ಸರಸ್ವತಿ ಕ್ರೆ. ಸೌ. ಸ. ನಿ.ದ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ ಎ ಉಪಸ್ಥಿತರಿದ್ದರು.

## ಹಾವೇರಿಯಲ್ಲಿ ಸೈಂಟ್ ಮಿಲಾಗ್ರಿಸ್‌ನ 43ನೇ ಶಾಖೆಯ ಉದ್ಘಾಟನೆ



**ಹಾವೇರಿ :** ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಲಿ., ಕಾರವಾರ ಸಹಕಾರಿಯ 43ನೇ ಶಾಖೆಯು ಹಾವೇರಿಯಲ್ಲಿ ಸೈಂಟ್ ಆನ್ಸ್ ಚರ್ಚ್‌ನ ಧರ್ಮಗುರುಗಳಾದ ವಂದನೀಯ ಫಾ. ಮಾರ್ಟಿನ್ ವಾಜ್‌ರವರ ಆಶೀರ್ವಚನದಲ್ಲಿ, ಹಾವೇರಿಯ ಹುಕ್ಕೇರಿ ಮಠದ ಪರಮ ಪೂಜ್ಯ ಶ್ರೀ ಮ.ನಿ.ಪ್ರ. ಸದಾಶಿವ ಮಹಾಸ್ವಾಮಿಗಳು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ.ಬಿ.ಕಲಾಲ್‌ರವರು ಆಗಮಿಸಿದ್ದರು.

## ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ



**ಹಾನಗಲ್ಲ :** ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹಾನಗಲ್ಲ ಸಹಕಾರಿಯ 14ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 15.09.2016ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಬಿ.ಕಲಾಲ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಮುಖ್ಯ ಅತಿಥಿಗಳಾಗಿ ಶ್ರೀ ಸಿ.ಎಂ.ಉದಾಸಿ, ಮಾನ್ಯ ಮಾಜಿ ಲೋಕೋಪಯೋಗಿ ಸಚಿವರು, ಕರ್ನಾಟಕ ಸರಕಾರ ಇವರು ಆಗಮಿಸಿದ್ದರು. ಸಹಕಾರಿಯು ಸನ್ 2015–16ನೇ ಸಾಲಿನಲ್ಲಿ ರೂ, 26,68,24,980.99/–ಗಳ ಆರ್ಥಿಕ ವಹಿವಾಟು ಕೈಗೊಂಡು ರೂ,10,12,896.05/–ಗಳ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.12ರಂತೆ ಡಿವಿಡೆಂಡ್ ವಿತರಿಸಲು ನಿರ್ಣಯಿಸಲಾಯಿತು. ಇದೇ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚಿನ ಅಂಕ ಪಡೆದ ಸದಸ್ಯರ ಮಕ್ಕಳಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಪ್ರತಿಭಾ ಪುರಸ್ಕಾರಗಳನ್ನು ಶ್ರೀ ಸಿ.ಎಂ.ಉದಾಸಿರವರು ವಿತರಿಸಿದರು.

## ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ



**ಯಲಹಂಕ :** ಹುಣಸಮಾರನಹಳ್ಳಿಯಲ್ಲಿರುವ ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯ 6ನೇ ವಾರ್ಷಿಕ ಸಭೆಯ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ ಸಾಧಕರ ಸನ್ಮಾನ ಕಾರ್ಯಕ್ರಮದಲ್ಲಿ ಕನ್ನಡ ಚಲನಚಿತ್ರದ ಖ್ಯಾತ ಸಾಹಿತಿ ಶ್ರೀ ಸಿ.ವಿ.ಶಿವಶಂಕರ್‌ರವರನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಸಹಕಾರಿಯ ಸದಸ್ಯರ ಮಕ್ಕಳು ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.



ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿ ನಿ., ಯರಗಟ್ಟಿ ಸಹಕಾರಿಯ ವತಿಯಿಂದ ಪ್ಯಾನ್‌ಕಾರ್ಡ್ ಸೌಲಭ್ಯ.

## ಅಂಬಲಪಾಡಿ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ



**ಅಂಬಲಪಾಡಿ :** ಅಂಬಲಪಾಡಿ ಸೌಹಾರ್ದ ಸಹಕಾರಿ ನಿ., ಅಂಬಲಪಾಡಿ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ಅಧ್ಯಕ್ಷರಾದ ಶ್ರೀ ಹರೀಶ್ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯ ಈ ವರ್ಷ ಲಾಭ ಗಳಿಕೆಯಲ್ಲಿ ಶೇ.40ರಷ್ಟು ಏರಿಕೆಯಾಗಿದ್ದು, ಪ್ರಸಕ್ತ ಸಾಲಿನಲ್ಲಿ ರೂ.10.56 ಲಕ್ಷ ಲಾಭ ಗಳಿಸಿದೆ. ಠೇವಣಿ ಸಂಗ್ರಹಣೆ ಹೆಚ್ಚಳವಾಗಿದೆ. ಸಾಲ ವಿತರಣೆಯಲ್ಲಿ ಶೇ.11.56 ವೃದ್ಧಿ ಮತ್ತು ಸಾಲ ವಸೂಲಾತಿಯಲ್ಲಿ ಶೇ.100ರಷ್ಟು ಸಾಲ ವಸೂಲಾತಿಯೊಂದಿಗೆ ಐದನೇಯ ವರ್ಷ ಪಾದಾರ್ಪಣೆಗೊಳ್ಳಲಿದೆ.

## ಜನಹಿತ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ




**ಉಡುಪಿ :** ಉಡುಪಿಯ ಜನಹಿತ ಸೌಹಾರ್ದ ಸಹಕಾರಿ ನಿಯಮಿತದ 9ನೇ ಮಹಾಸಭೆಯು ಅಧ್ಯಕ್ಷರಾದ ಶ್ರೀ ಗೋಪಾಲ್.ಯುರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸದಸ್ಯರಿಗೆ ಶೇ.10ರಷ್ಟು ಡಿವಿಡೆಂಡ್ ಘೋಷಿಸಲಾಯಿತು. ಸಹಕಾರಿಯು ಉಡುಪಿ, ಕಾರ್ಕಳ, ಮಣಿಪಾಲ ಮತ್ತು ಪೇತ್ರಿ ಶಾಖೆಗಳಲ್ಲಿ 92 ಕೋಟಿ ವ್ಯವಹಾರವನ್ನು ವರದಿ ವರ್ಷದಲ್ಲಿ ನಡೆಸಿರುತ್ತದೆ.

## ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ



**ಚಾಮರಾಜನಗರ :** ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ.,ದ ಪ್ರಥಮ ವಾರ್ಷಿಕ ಸರ್ವಸದಸ್ಯರ ಮಹಾಸಭೆಯು ಅಧ್ಯಕ್ಷರಾದ ಶ್ರೀ ಎಸ್.ಬಾಲಸುಬ್ರಮಣ್ಯರವರ ಅಧ್ಯಕ್ಷತೆಯಲ್ಲಿ ಜರುಗಿತು.

## ಡಾ. ಪ್ರಭಾಕರ ಕೋರೆ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ




**ಅಂಕಲಿ :** ಡಾ. ಪ್ರಭಾಕರ ಕೋರೆ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅಂಕಲಿ ಸಹಕಾರಿಯ ವಾರ್ಷಿಕ ಸರ್ವ ಸಾಧಾರಣ ಸಭೆಯು ಅಧ್ಯಕ್ಷರಾದ ಶ್ರೀ ಮಹಾಂತೇಶ ಲಿ. ಪಾಟೀಲರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯಲ್ಲಿ ಸಂಸ್ಥೆಯ ಸಂಸ್ಥಾಪಕರಾದ ಡಾ.ಪ್ರಭಾಕರ ಕೋರೆಯವರು ಹಾಜರಿದ್ದರು. ವರದಿ ವರ್ಷದಲ್ಲಿ ಸಹಕಾರಿಯು ಒಟ್ಟು ರೂ.1.87 ಕೋಟಿ ಶೇರು ಬಂಡವಾಳ ಹೊಂದಿದ್ದು, ರೂ.386.13 ಕೋಟಿ ಸಂಗ್ರಹಿಸಿದೆ, ರೂ.264.19 ಕೋಟಿ ವಿವಿಧ ರೀತಿಯ ಸಾಲಗಳನ್ನು ವಿತರಿಸಲಾಗಿದ್ದು, ರೂ.1.67 ಕೋಟಿ ಲಾಭ ಗಳಿಸಿದೆ. ಸಭೆಯಲ್ಲಿ ಸದಸ್ಯರಿಗೆ ಶೇ.15 ಲಾಭಾಂಶವನ್ನು ಘೋಷಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾಮದ ಕನ್ನಡ ಮಾಧ್ಯಮ ಹಾಗೂ ಆಂಗ್ಲ ಮಾಧ್ಯಮ ಶಾಲೆಯ ಕ್ರೀಡಾಕೂಟದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ನೀಡಿ, ಗೌರವಿಸಲಾಯಿತು ಮತ್ತು ಸಹಕಾರಿಯ ಹೆಚ್ಚಿನ ಪಿಗ್ಮಿ ಸಂಗ್ರಾಹಕಾರರಿಗೆ ಹಾಗೂ ಉತ್ತಮ ಶಾಖೆಗಳನ್ನು ಆಯ್ಕೆ ಮಾಡಿ ಪ್ರಶಸ್ತಿ ನೀಡಲಾಯಿತು. ಅಪಘಾತದಲ್ಲಿ ಮಡಿದ ಸದಸ್ಯರಿಗೆ ತಲಾ ರೂ.1,00,000/–ಗಳ ಚೆಕ್ಕನ್ನು 9 ಸದಸ್ಯರ ಕುಟುಂಬಗಳಿಗೆ ನೀಡಲಾಯಿತು.

## ಶ್ರೀ ಶರಣಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ



ದಿನಾಂಕ : 03.09.2016ರಂದು ಶ್ರೀ ಶರಣಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಇದರ ಸಾಮಾನ್ಯ ಸಭೆ ಹಾಗೂ ಶರಣ ಸಂಭ್ರಮದ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಉದ್ಘಾಟಿಸಿ, ಉತ್ತಮ ಗ್ರಾಹಕರಿಂದ ಸಹಕಾರಿ ಸಂಸ್ಥೆಗಳ ಬೆಳವಣಿಗೆ ಸಾಧ್ಯ ಹಾಗೂ ಹಣಕಾಸು ವ್ಯವಹಾರವೊಂದೇ ನಡೆಸದೇ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದು ಅವಶ್ಯಕವಾಗಿದೆ ಎಂದು ತಿಳಿದರು.

## ಉಡುಪಿ ಮೀನುಮಾರಾಟಗಾರರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ



**ಉಡುಪಿ :** ಉಡುಪಿ ಮೀನುಮಾರಾಟಗಾರರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಉಡುಪಿ ಸಹಕಾರಿಯ 6ನೇ ವಾರ್ಷಿಕ ಮಹಾಸಭೆಯು ಸಹಕಾರಿಯ ಅಧ್ಯಕ್ಷರಾದ ಬೇಬಿ ಎಚ್.ಸಾಲ್ಯಾನ್ ಕೊಡವೂರು ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯು ರೂ.4ಕೋಟಿಗೂ ಮಿಕ್ಕಿ ದುಡಿಯುವ ಬಂಡವಾಳವನ್ನು ಹೊಂದಿದ್ದು, ರೂ.10 ಲಕ್ಷಕ್ಕೂ ಮಿಕ್ಕಿ ಲಾಭವನ್ನು ಹೊಂದಿದೆ. ಎ ದರ್ಜೆ ಸದಸ್ಯರಿಗೆ ಲಾಭಾಂಶದಲ್ಲಿ ಶೇ.13ರಷ್ಟು ಡಿವಿಡೆಂಡ್‌ನ್ನು ಘೋಷಿಸಲಾಯಿತು. ಇದೇ ಸಂದರ್ಭದಲ್ಲಿ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರಾಗಿ ಆಯ್ಕೆಯಾದ ಶ್ರೀ ಪ್ರಮೋದ್ ಮಧ್ವರಾಜ್ ಅವರನ್ನು ಸನ್ಮಾನಿಸಲಾಯಿತು ಹಾಗೂ ಸದಸ್ಯರ 50 ಮಕ್ಕಳಿಗೆ ಒಟ್ಟು 75 ಸಾವಿರ ರೂ. ಮೌಲ್ಯದ ವಿದ್ಯಾರ್ಥಿ ವೇತನ ವಿತರಣೆ ಮಾಡಲಾಯಿತು.

## ಶ್ರೀ ಗುರುಮಾತೆಯರ ಮಹಿಳಾ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ



**ವಿಜಯಪುರ :** ಶ್ರೀ ಗುರುಮಾತೆಯರ ಮಹಿಳಾ ಸೌಹಾರ್ದ ಸಹಕಾರಿ ನಿ., ವಿಜಯಪುರ ಸಹಕಾರಿಯ ಸಾಮಾನ್ಯ ಸಭೆಯು ಅಧ್ಯಕ್ಷರಾದ ಶ್ರೀಮತಿ ಮಹಾದೇವಿ ಚ. ಹಿರೇಮಠರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು ರೂ.5,35,000/–ಗಳಿಂದ ಪ್ರಾರಂಭಗೊಂಡು ದಿನಾಂಕ 18.02.2016 ರಿಂದ 31.03.2016ರವರೆಗಿನ ಒಟ್ಟು ಜಮಾ–ಖರ್ಚು ರೂ.13,67,200/–ರವರೆಗೆ ವ್ಯವಹಾರ ನಡೆದಿರುತ್ತದೆ.

## ಶ್ರೀ ಸಾಯಿ ಚನ್ನಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ



**ಸಿಂಧನೂರು :** ಶ್ರೀ ಸಾಯಿ ಚನ್ನಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ., ಸಿಂಧನೂರು ಸಹಕಾರಿಯ 6ನೇ ವಾರ್ಷಿಕ ಮಹಾಸಭೆಯು ಸಿಂಧನೂರಿನಲ್ಲಿ ನೆರವೇರಿತು. ರೂ.40.03 ಲಕ್ಷಗಳನ್ನು ಲಾಭ ಗಳಿಸಿದ್ದು, ಶೇ.18ರಷ್ಟು ಲಾಭಾಂಶವನ್ನು ಸದಸ್ಯರಿಗೆ ಹಂಚಲು ತೀರ್ಮಾನಿಸಲಾಯಿತು.

## ಮಂಗಳೂರು ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ




**ಮಂಗಳೂರು :** ಮಂಗಳೂರು ಸೌಹಾರ್ದ ಸಹಕಾರಿ ಲಿ., ಮಂಗಳೂರು ಸಹಕಾರಿಯ ಮಹಾ ಸಭೆಯು ಶ್ರೀ ಕೆ.ಭಾಸ್ಕರ್ ರಾವ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯಲ್ಲಿ ಸಹಕಾರಿಯ "ಎ" ಕ್ಲಾಸ್ ಸದಸ್ಯರಿಗೆ ಶೇ.25ರಷ್ಟು ಡಿವಿಡೆಂಡ್ ಘೋಷಿಸಲಾಯಿತು.

## ಸುಗ್ಗಿ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ



**ಮಂಗಳೂರು :** ಸುಗ್ಗಿ ಸೌಹಾರ್ದ ಸಹಕಾರಿ ನಿ., ಕಂಕನಾಡಿ ಸಹಕಾರಿಯ ವಾರ್ಷಿಕ ಮಹಾಸಭೆಯು ಅಧ್ಯಕ್ಷರಾದ ಶ್ರೀ ಅನಿಲ್ ದಾಸ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು ರೂ.52.14 ಲಕ್ಷ ಠೇವಣಿಗಳನ್ನು, ವಿವಿಧ ಉದ್ದೇಶಗಳಿಗೆ ರೂ.22.11 ಲಕ್ಷ ಸಾಲಗಳನ್ನು ನೀಡಿರುತ್ತದೆ.

## ಶ್ರೀ ಸೋಮವಂಶ ಆರ್ಯ ಕ್ಷತ್ರಿಯ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ



**ಸಿಂದಗಿ :** ಶ್ರೀ ಸೋಮವಂಶ ಆರ್ಯ ಕ್ಷತ್ರಿಯ ಸೌಹಾರ್ದ ಸಹಕಾರಿ ನಿ., ಸಿಂದಗಿ ಸಹಕಾರಿಯ 2ನೇ ವಾರ್ಷಿಕ ಮಹಾಸಭೆಯು ಅಧ್ಯಕ್ಷರಾದ ಶ್ರೀ ಅಂಬಾಜಿ ಎಂ. ಗಾಯಕವಾಡರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯು ರೂ. 41,04,000/–ಗಳ ಶೇರು ಬಂಡವಾಳ, ರೂ. 64,93,591/–ಗಳ ಠೇವಣಿಗಳು, ರೂ. 89,700/–ಗಳ ಕಾಯ್ದಿರಿಸಿದ ನಿಧಿಗಳು, ರೂ. 61,15,577/–ಗಳ ಸಾಲಗಳನ್ನು ನೀಡಲಾಗಿದ್ದು, ರೂ.6.5 ಕೋಟಿಗಳ ವ್ಯವಹಾರ ನಡೆಸಿ, ರೂ. 1,40,200/–ಗಳ ಲಾಭವನ್ನು ಗಳಿಸಿರುತ್ತದೆ.

## ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ

**ಹೊಸಪೇಟೆ :** ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಪೇಟೆ ಸಹಕಾರಿಯ 9ನೇ ವಾರ್ಷಿಕ ಮಹಾ ಸಭೆಯು ಅಧ್ಯಕ್ಷರಾದ ಶ್ರೀ ಎಂ.ನೀಲಕಂಠಯ್ಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯು ರೂ.6,97,756/–ಗಳ ನಿವ್ವಳ ಲಾಭವನ್ನು ಹೊಂದಿದ್ದು, ಸದಸ್ಯರಿಗೆ ಶೇ.20ರಷ್ಟು ಲಾಭಾಂಶವನ್ನು ವಿತರಿಸಲು ತೀರ್ಮಾನಿಸಲಾಯಿತು. ಸಹಕಾರಿಯು 1518 ಸದಸ್ಯರನ್ನು ಹೊಂದಿದ್ದು, ರೂ.5,74,900 ಶೇರು ಬಂಡವಾಳ, ರೂ.4 ಕೋಟಿ ಠೇವಣಿಗಳು, ರೂ.2.22 ಕೋಟಿ ಸಾಲಗಳನ್ನು ವಿತರಿಸಿದ್ದು, ರೂ.26.33 ಕೋಟಿ ವಹಿವಾಟು ನಡೆಸಿದೆ. ಸಭೆಯಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎಲ್.ಎಸ್.ಆನಂದ ಹಾಗೂ ನಿರ್ದೇಶಕರುಗಳು ಉಪಸ್ಥಿತರಿದ್ದರು.






## ವೀರತಪಸ್ವೀ ಸೌಹಾರ್ದ ಪತ್ತಿನ ಸಹಕಾರಿಯ ಸಾಮಾನ್ಯ ಸಭೆ

ದಿನಾಂಕ : 18.09.2016ರಂದು ವೀರತಪಸ್ವೀ ಸೌಹಾರ್ದ ಪತ್ತಿನ ಸಹಕಾರಿ ನಿ., ಸರಸಾಂಭ ಸಹಕಾರಿಯ ಸಾಮಾನ್ಯ ಸಭೆಯ ಕಾರ್ಯಕ್ರಮವನ್ನು ಶ್ರೀ ಗುರುನಾಥ ಜಾಂತಿಕರ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ, ಬೆಂಗಳೂರು ಇವರು ಉದ್ಘಾಟಿಸಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಸಶಕ್ತರಾಗಿ ಸ್ವಾಭಿಮಾನದ ಬದುಕು ಕಟ್ಟಿಕೊಡುವಲ್ಲಿ ಸೌಹಾರ್ದ ಸಹಕಾರಿಗಳ ಪಾತ್ರ ಹಿರಿದಾದದ್ದು ಎಂದರು. ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಶಾಂತಿನಾಥ ಪಂಡಿತ ಹಾಜರಿದ್ದರು.

## ಮಲೆನಾಡು ವಿವಿಧೋದ್ದೇಶ ಸೌಹಾರ್ದ ಸಹಕಾರಿ



ಮಲೆನಾಡು ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೋಣಂದೂರು ಸಹಕಾರಿಯ 6ನೇ ಸರ್ವಸದಸ್ಯರ ಸಭೆಯು ಅಧ್ಯಕ್ಷರಾದ ಶ್ರೀ ಪ್ರಸಾದ್.ಕೆ.ಆರ್. ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯು ರೂ.11,44,356 ಲಾಭ ಗಳಿಸಿದ್ದು, ಶೇ.12ರಷ್ಟು ಲಾಭಾಂಶ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

## ಅಣ್ಣ ಬಸವಣ್ಣ ಸೌಹಾರ್ದ ಪತ್ತಿನ ಸಹಕಾರಿಯ ಸಾಮಾನ್ಯ ಸಭೆ

ದಿನಾಂಕ : 18.09.2016 ರಂದು ಅಣ್ಣ ಬಸವಣ್ಣ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಸಹಕಾರಿಯ ಸಾಮಾನ್ಯ ಸಭೆಯ ಕಾರ್ಯಕ್ರಮವನ್ನು ಶ್ರೀ ಗುರುನಾಥ ಜಾಂತಿಕರ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಶ್ರೀಯುತರನ್ನು ಸಹಕಾರಿಯ ಆಡಳಿತ ಮಂಡಲಿಯವರು ಸನ್ಮಾನಿಸಿದರು.

## ಗಾಯತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ




ಕೊಪ್ಪ : ಗಾಯತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪ ಸಹಕಾರಿಯ ವಾರ್ಷಿಕ ಸರ್ವ ಸದಸ್ಯರ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ಎನ್.ವಿಶ್ವನಾಥ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ವರ್ಷಾಂತ್ಯಕ್ಕೆ ಸಹಕಾರಿಯು ಒಟ್ಟು ರೂ.44.47 ಲಕ್ಷ ಪಾಲು ಬಂಡವಾಳವನ್ನು ಹೊಂದಿದ್ದು, ರೂ.14.21 ಕೋಟಿ ಠೇವಣಿ ಸಂಗ್ರಹಿಸಿದ್ದು, ರೂ.18.28 ಕೋಟಿ ಸಾಲ ವಿತರಿಸಿದೆ. ರೂ.27.94 ಲಕ್ಷ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.12 ದರದಲ್ಲಿ ಡಿವಿಡೆಂಡ್ ನೀಡಲು ಸಭೆಯು ನಿರ್ಧರಿಸಿತು.

## ಶ್ರೀ ಶಿವಜ್ಞಾನ ಸಂಪನ್ನ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ



ಶ್ರೀ ಶಿವಜ್ಞಾನ ಸಂಪನ್ನ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಹುಕ್ಕೇರಿ ಸಹಕಾರಿಯ 12ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಎಸ್.ಎಸ್. ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ.ಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ ಶ್ರೀಶೈಲಯ್ಯಾ ಈ. ಸಂಬಾಳರವರು ಪ್ರೋತ್ಸಾಹ ಧನ ನೀಡಿ, ಗೌರವಿಸಿದರು.



ಕೌಸ್ತುಭ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮೈಸೂರು ಸಹಕಾರಿಯ 3ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯಲ್ಲಿ ಪ್ರತಿಭಾ ಪುರಸ್ಕಾರ ಮಾಡಲಾಯಿತು.



ಉಪ್ಪಿನಂಗಡಿ : ಅನುಗ್ರಹ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಉಪ್ಪಿನಂಗಡಿ ಸಹಕಾರಿಯ ಮಹಾಸಭೆಯು ಅಧ್ಯಕ್ಷರಾದ ಶ್ರೀ ವಿನ್ಸೆಂಟ್ ಫೆರ್ನಾಂಡಿಸ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯು ರೂ.2.39 ಕೋಟಿ ವ್ಯವಹಾರವನ್ನು ಕೇವಲ ನಾಲ್ಕುವರೆ ತಿಂಗಳಿನಲ್ಲಿ ನಡೆಸಿರುತ್ತದೆ.



ವೈಶ್ಯ ವಿವಿಧೋದ್ದೇಶ ಪತ್ತಿನ ಸೌಹಾರ್ದ ಸಹಕಾರಿ ನಿ., ಮಾಗಡಿ ಸಹಕಾರಿಯ ಮಹಾಸಭೆ.



ಬಾಗಲವಾಡ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾಗಲವಾಡ ಸಹಕಾರಿಯ ವಾರ್ಷಿಕ ಮಹಾಸಭೆ.



ಶ್ರೀ ಕಾಳಿಕಾಂಬಾ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಯ 13ನೇ ವಾರ್ಷಿಕ ಮಹಾಸಭೆ. ಸದಸ್ಯರಿಗೆ ಶೇ.11ರಂತೆ ಡಿವಿಡೆಂಡ್ ನೀಡಲು ಘೋಷಿಸಲಾಯಿತು.



ಬಾದಾಮಿ : ನ್ಯಾಯಮಿತ್ರ ಸೌಹಾರ್ದ ಪತ್ತಿನ ಸಹಕಾರಿ ನಿ., ಬಾದಾಮಿ ಸಹಕಾರಿಯ 4ನೇ ಸರ್ವ ಸದಸ್ಯರ ಸಾಮಾನ್ಯ ಸಭೆಯು ಅಧ್ಯಕ್ಷರಾದ ಶ್ರೀ ಎಸ್.ಎಸ್.ಮಿಟ್ಟಲಕೋಟರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯು ರೂ.4,01,310/–ಗಳ ಲಾಭವನ್ನು ಗಳಿಸಿದ್ದು, ಶೇ.7ರಷ್ಟು ಡಿವಿಡೆಂಡ್ ಹಂಚಲು ತೀರ್ಮಾನಿಸಲಾಯಿತು.



ಹುಲ್ಲೋಳಿ : ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಹುಲ್ಲೋಳಿ ಸಹಕಾರಿಯ ವಾರ್ಷಿಕ ಮಹಾಸಭೆ. ಸಹಕಾರಿಯು ರೂ. 92,31,931/–ಗಳ ನಿವ್ವಳ ಲಾಭ ಗಳಿಸಿದ್ದು, ಶೇ.25ರಷ್ಟು ಲಾಭಾಂಶ ಹಂಚಿಕೆ ಮಾಡಲು ತೀರ್ಮಾನಿಸಲಾಯಿತು.



ಶ್ರೀ ಜೇನುಕಲ್ ಸೌಹಾರ್ದ ಪತ್ತಿನ ಸಹಕಾರಿ ನಿ., ತಿಪಟೂರು ಸಹಕಾರಿಯ 9ನೇ ಸರ್ವಸದಸ್ಯರ ಮಹಾಸಭೆ.

## ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ



**ಚಿಕ್ಕೋಡಿ :** ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಸಹಕಾರಿಯ 4ನೇ ಸಾಮಾನ್ಯ ಸಭೆಯು ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು 960 ಸದಸ್ಯರು, ರೂ.30.49 ಲಕ್ಷ ಶೇರು ಬಂಡವಾಳ, ರೂ.8.55 ಲಕ್ಷ ನಿಧಿಗಳು, ರೂ.9 ಕೋಟಿ 2 ಲಕ್ಷ ಠೇವಣಿಗಳು, ರೂ.6 ಕೋಟಿ 40 ಲಕ್ಷ ಸಾಲಗಳು, ರೂ.8 ಲಕ್ಷ 68 ಸಾವಿರ ಲಾಭ ಮತ್ತು ರೂ.10 ಕೋಟಿ 43 ಲಕ್ಷ ದುಡಿಯುವ ಬಂಡವಾಳ ಹಾಗೂ ರೂ.58 ಕೋಟಿ 24 ಲಕ್ಷ ವಾರ್ಷಿಕ ವಹಿವಾಟು ನಡೆಸಿರುತ್ತದೆ.



ಹಾವೇರಿ : ಜೀವನಸ್ಫೂರ್ತಿ ಸೌಹಾರ್ದ ಸಹಕಾರಿ ನಿ., ಹಾವೇರಿ ಸಹಕಾರಿಯ ಮೊದಲನೇ ಸರ್ವ ಸದಸ್ಯರ ಸಭೆಯು ಅಧ್ಯಕ್ಷರಾದ ಶ್ರೀ ಜಯರಾಮಪ್ಪ ಆರ್. ಮಾಳಾಪೂರರವರ ಅಧ್ಯಕ್ಷತೆಯಲ್ಲಿ ನಡೆಯಿತು.



ಕವಲೇದುರ್ಗ ಬಹುಉದ್ದೇಶಿ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ ಸಹಕಾರಿಯ ಸರ್ವಸದಸ್ಯರ ಸಭೆಯು ಅಧ್ಯಕ್ಷರಾದ ಶ್ರೀ ಎಂ.ಎಂ.ಲಕ್ಷ್ಮೀನಾರಾಯಣ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು.

## ಶ್ರೀ ಭುವನೇಂದ್ರ ಸ್ವಾಮೀಜಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ



**ಮಂಗಳೂರು :** ಶ್ರೀ ಭುವನೇಂದ್ರ ಸ್ವಾಮೀಜಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮಂಗಳೂರು ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆಯು ಅಧ್ಯಕ್ಷರಾದ ಶ್ರೀ ಎಸ್.ಸತೀಶ್ ನಾಯಕ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.




ಮಾನವಿ : ನಾಗಲಾಂಬಿಕೆ ಪತ್ತಿನ ಸೌಹಾರ್ದ ಸಹಕಾರಿ ನಿ., ಮಾನವಿ ಸಹಕಾರಿಯ 2ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ 150ಕ್ಕೂ ಹೆಚ್ಚು ಮಹಿಳೆಯರಿಗೆ ಉತ್ತಮ ಗ್ರಾಹಕ ಪ್ರಶಸ್ತಿ ನೀಡಿ, ಗೌರವಿಸಲಾಯಿತು. ಸಹಕಾರಿಯು ರೂ.21,36,253/–ಗಳ ನಿವ್ವಳ ಲಾಭವನ್ನು ಗಳಿಸಿರುತ್ತದೆ.



ಪ್ಯಾಟಸನ್ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಸಹಕಾರಿಯ 2ನೇ ವರ್ಷದ ಸರ್ವಸದ್ಯಸರ ಸಾಮಾನ್ಯ ಸಭೆಯು ಶ್ರೀ ಅನೀಲ ಪ ಪಾಟೀಲರವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರುಗಿತು.




ಜಂಗಮ ಸೌಹಾರ್ದ ಸಹಕಾರಿ ನಿ., ದಾವಣಗೆರೆ ಸಹಕಾರಿಯ 6ನೇ ಸರ್ವಸದಸ್ಯರ ಮಹಾಸಭೆ.



ಹೊಸದುರ್ಗ : ನಿಸರ್ಗ ಸ್ವಶಕ್ತಿ ಸೌಹಾರ್ದ ಸ್ವ-ಸಹಾಯ ಸಹಕಾರಿ ನಿ., ಹೊಸದುರ್ಗ ಸಹಕಾರಿಯ 13ನೇ ವಾರ್ಷಿಕ ಸಾಮಾನ್ಯ ಸಭೆಯು ಅಧ್ಯಕ್ಷರಾದ ಶ್ರೀಮತಿ ಟಿ.ಅನುಸೂಯರವರ ಅಧ್ಯಕ್ಷತೆಯಲ್ಲಿ ಜರುಗಿತು.

## ಶ್ರೀ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಸೌಹಾರ್ದ ಪತ್ತಿನ ಸಹಕಾರಿಯ ಸಾಮಾನ್ಯ ಸಭೆ




ಕೆಂಭಾವಿ : ಶ್ರೀ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಸೌಹಾರ್ದ ಪತ್ತಿನ ಸಹಕಾರಿ ನಿ., ಕೆಂಭಾವಿ ಸಹಕಾರಿಯ ಸಾಮಾನ್ಯ ಸಭೆಯು ಅಧ್ಯಕ್ಷರಾದ ಶ್ರೀ ಶಾಂತಗೌಡ ಎಂ. ಬಿರಾದಾರರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು ರೂ.13.26 ಲಕ್ಷಗಳ ಲಾಭ ಗಳಿಸಿದ್ದು, ಸದಸ್ಯರುಗಳಿಗೆ ಶೇ.20ರಷ್ಟು ಡಿವಿಡೆಂಡ್‌ನ್ನು ನೀಡಲು ತೀರ್ಮಾನಿಸಲಾಯಿತು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವೈ.ಟಿ.ಪಾಟೀಲರವರು ಸಭೆಯಲ್ಲಿ ಮಾತನಾಡಿದರು.

## ನವಕಲ್ಯಾಣ ಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್‌ನ ಸಾಮಾನ್ಯ ಸಭೆ



ಬೆಂಗಳೂರು : ನವಕಲ್ಯಾಣ ಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ನಿ., ಬೆಂಗಳೂರು ಸಹಕಾರಿಯ 4ನೇ ಸರ್ವ ಸದಸ್ಯರ ಸಾಮಾನ್ಯ ಸಭೆಯು ಅಧ್ಯಕ್ಷರಾದ ಶ್ರೀ ವಿ.ಬಿ.ಪಾಟೀಲ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯು ರೂ.35.69 ಲಕ್ಷಗಳ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.11ರಷ್ಟು ಡಿವಿಡೆಂಡ್ ವಿತರಿಸಲು ತೀರ್ಮಾನಿಸಲಾಯಿತು.



ಪ್ರಗತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸಹಕಾರಿಯ 6ನೇ ಸಾಮಾನ್ಯ ಸಭೆ.




ಯು.ಕೆ. ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಯಲ್ಲಾಪುರ ಸಹಕಾರಿಯ 15ನೇ ವಾರ್ಷಿಕ ಸಭೆ.



ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಜಮಖಂಡಿ ಸಹಕಾರಿಯ ವಾರ್ಷಿಕ ಸರ್ವಸಾಧಾರಣ ಸಭೆ.



ಶ್ರೀ ನೀಲಗಿರೀಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಹಕಾರಿಯ ಸರ್ವ ಸದಸ್ಯರ ಸಾಮಾನ್ಯ ಸಭೆ.



ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಲಿ., ಪಾವಗಡ ಸಹಕಾರಿಯ 15ನೇ ವಾರ್ಷಿಕ ಸರ್ವಸದಸ್ಯರ ಸಭೆ.




ದಿ ಮುಸ್ಲಿಂ ಸೌಹಾರ್ದ ಸಹಕಾರಿ ನಿ., ಶಹಾಪೂರ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ಅಧ್ಯಕ್ಷರಾದ ಶ್ರೀ ನಸೀರೋದ್ದೀನ್ ಎಸ್. ಲಲ್ಲೋಟಿರವರ ಅಧ್ಯಕ್ಷತೆಯಲ್ಲಿ ಜರುಗಿತು



## ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ

**ಒಡಿಯೂರು :** ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಒಡಿಯೂರು ಸಹಕಾರಿಯ ಮಹಾಸಭೆಯು ಅಧ್ಯಕ್ಷರಾದ ಶ್ರೀ ಎ.ಸುರೇಶ್ ರೈರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯು 95 ಕೋಟಿ 71 ಲಕ್ಷ ರೂ. ಗಳ ಠೇವಣಿ ಸಂಗ್ರಹಿಸಿ, 60 ಕೋಟಿ 52 ಲಕ್ಷ ರೂ. ಗಳ ಸಾಲ ನೀಡಿದೆ. 97.73 ಕೋಟಿ ರೂ.ಗಳ ದುಡಿಯುವ ಬಂಡವಾಳ ಹೊಂದಿದ್ದು, ಒಟ್ಟು 156.22 ಕೋಟಿ ರೂ.ಗಳ ವ್ಯವಹಾರ ನಡೆಸಿದೆ. 81.04 ಲಕ್ಷ ರೂ.ಗಳ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ. 15ರ ಡಿವಿಡೆಂಡ್ ನೀಡಲು ತೀರ್ಮಾನಿಸಲಾಯಿತು.

## ವಿಪ್ರ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ

**ಧಾರವಾಡ:** ವಿಪ್ರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಧಾರವಾಡ ಸಹಕಾರಿಯ ವಾರ್ಷಿಕ ಸರ್ವ ಸಾಧಾರಣ ಸಭೆಯು ಅಧ್ಯಕ್ಷರಾದ ಶ್ರೀ ವೆಂಕಟೇಶ ದೇಸಾಯಿರವರ ಅಧ್ಯಕ್ಷತೆಯಲ್ಲಿ ಜರುಗಿತು. 3.5 ಕೋಟಿ ರೂಪಾಯಿ ವ್ಯವಹಾರ ನಡೆಸಿದೆ. 8% ಲಾಭಾಂಶ ವಿತರಿಸಲು ತೀರ್ಮಾನಿಸಲಾಯಿತು.






## ಸಾಯಿಗಣೇಶ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್‌ನ ಸಾಮಾನ್ಯ ಸಭೆ

**ಉಡುಪಿ :** ಸಾಯಿಗಣೇಶ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಉಡುಪಿ ಸಹಕಾರಿಯ 15ನೇ ವಾರ್ಷಿಕ ಮಹಾಸಭೆಯು ಶ್ರೀ ಎಚ್.ಆರ್.ಶೆಣೈರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು 12.02 ಕೋಟಿ ರೂ.ಗಳ ಠೇವಣಿ ಸಂಗ್ರಹಿಸಿ, 11.44 ಕೋಟಿ ರೂ.ಗಳ ಸಾಲ ಮತ್ತು ಮುಂಗಡಗಳನ್ನು ವಿತರಿಸಿದೆ. 76.83 ಲಕ್ಷ ರೂ.ಗಳ ನಿಧಿಗಳು, 15.10 ಲಕ್ಷ ರೂ.ಗಳ ನಿವ್ವಳ ಲಾಭ ಗಳಿಸಿದ್ದು, ಶೇ.18ರಷ್ಟು ಡಿವಿಡೆಂಡ್ ಘೋಷಿಸಿದೆ.

## ಶ್ರೀ ಶಾಂತೇಶ್ವರ ಸೌಹಾರ್ದ ಪತ್ತಿನ ಸಹಕಾರಿಯ ಸಾಮಾನ್ಯ ಸಭೆ

**ಇಂಡಿ :** ಶ್ರೀ ಶಾಂತೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಇಂಡಿ ಸಹಕಾರಿಯ ವಾರ್ಷಿಕ ಸರ್ವಸಾಧಾರಣ ಸಭೆಯು ಅಧ್ಯಕ್ಷರಾದ ಶ್ರೀ ಕಾಸುಗೌಡ ಬಿರಾದಾರರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯು ಶೇರು ಬಂಡವಾಳ 82.82 ಲಕ್ಷ, ನಿಧಿಗಳು 121.27 ಲಕ್ಷ, ಠೇವಣಿಗಳು 964.11 ಲಕ್ಷ, ಸಾಲ ಮತ್ತು ಮುಂಗಡಗಳು 992.57 ಲಕ್ಷ, ಗುಂತಾವಣೆ 293.43 ಲಕ್ಷ, ದುಡಿಯುವ ಬಂಡವಾಳ 1361.74 ಲಕ್ಷ, ಸದಸ್ಯರು 2967 ಹೊಂದಿದ್ದು, 43.61 ಲಕ್ಷ ಲಾಭವನ್ನು ಗಳಿಸಿದೆ.



## ನಿಮ್ಮ ಪ್ರಶ್ನೆ



## ನಮ್ಮ ಉತ್ತರ

– ಶ್ರೀಕಾಂತ ಬರುವೆ
ಸಹ ಪ್ರಧಾನ ವ್ಯವಸ್ಥಾಪಕರು,
ಕ.ರಾ.ಸೌ.ಸಂ.ಸ.ನಿ.,

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ – ಸಂಪಾದಕರು

**ಜಗದೀಶ ಜೋಶಿ, ಹುಬ್ಬಳ್ಳಿ**

**1. ಸಹಕಾರಿಯ ಸದಸ್ಯನಿಗೆ ವಾರ್ಷಿಕ ಮಹಾಸಭೆಯಲ್ಲಿ ಹಾಜರಾಗಲು ಅನಾನುಕೂಲ ಉಂಟಾದಲ್ಲಿ ಪತ್ರದ / ಅರ್ಜಿಯ ಮುಖಾಂತರ ತಿಳಿಸಿದಲ್ಲಿ ಸದರಿ ಸದಸ್ಯ ಮಹಾಸಭೆಯಲ್ಲಿ ಹಾಜರಿ ಇದ್ದಾನೆಯೆಂದು ಪರಿಗಣಿಸಬಹುದೇ? ಪರಿಗಣಿಸಿದಲ್ಲಿ, ಸತತ ಇಂತಹ ಮೂರು ಬಾರಿಯು ಇಂತಹ ಅರ್ಜಿ ಸಲ್ಲಿಸುವ ಅವಕಾಶ ಇದೆಯೇ?**

**ಉತ್ತರ :** ಸಹಕಾರಿಯ ಸದಸ್ಯನಿಗೆ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಹಾಜರಾಗಲು ಅನಾನುಕೂಲ ಉಂಟಾದಲ್ಲಿ ಪತ್ರದ ಮುಖಾಂತರ ತಿಳಿಸಿದಲ್ಲಿ ಸದರಿ ಗೈರು ಹಾಜರಿಗೆ ಸದಸ್ಯನು ಅನುಮತಿಯನ್ನು ಪಡೆದುಕೊಂಡಂತಾಗುತ್ತದೆಯೇ ವಿನಃ ಸಾಮಾನ್ಯ ಸಭೆಯಲ್ಲಿ ಹಾಜರಿದ್ದಂತಾಗುವುದಿಲ್ಲ. ಇಂತಹ ಅನುಮತಿಯನ್ನು ಪಡೆದುಕೊಳ್ಳಲು ಯಾವುದೇ ಮಿತಿ ಇರುವುದಿಲ್ಲ ಹಾಗೂ ಅನುಮತಿಯನ್ನು ಪಡೆದು ಗೈರುಹಾಜರಾಗಿರುವುದನ್ನು ಸಾಮಾನ್ಯ ಸಭೆಯ ಕೋರಂಗೆ ಪರಿಗಣಿಸುವಂತಿಲ್ಲ.

ಈ ಪ್ರಾವಧಾನದ ಹಿಂದಿನ ಉದ್ದೇಶ ಕ್ರಿಯಾಶೀಲ ಸದಸ್ಯರಿರುವುದಾಗಿರುತ್ತದೆ. ಯಾವುದೇ ಸದಸ್ಯ ತಾನು ವಾರ್ಷಿಕ ಸಾಮಾನ್ಯ ಸಭೆಗೆ ಹಾಜರಾಗಲು ಸಾಧ್ಯವಿಲ್ಲವೆಂದು ಪತ್ರವನ್ನು ನೀಡುತ್ತಾನೆಂದರೆ ಅಂತಹ ಸದಸ್ಯನು ಕ್ರಿಯಾಶೀಲನಾಗಿದ್ದೆನೆಂದೇ ಅರ್ಥ.

**2. ಲಾಭಾಂಶ ಸಮೀಕರಣ ನಿಧಿ, ಶೇರು ಸರಿಪಡಿಸುವ ನಿಧಿ ಯಾವ ಸಮಯದಲ್ಲಿ ಉಪಯೋಗಿಸಬಹುದು?**

**ಉತ್ತರ :** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 10 (2) (xxi) ರಲ್ಲಿ ತಿಳಿಸಿರುವ ನಿಧಿಗಳನ್ನು ಹೊರತುಪಡಿಸಿ ಸಹಕಾರಿಯ ಉಪವಿಧಿಯ ಪ್ರಾವಧಾನದಡಿ ಸೃಜಿಸಿದ ನಿಧಿಗಳನ್ನು, ಆಯಾ ನಿಧಿಗಳನ್ನು ಸೃಜಿಸಿದ ಉದ್ದೇಶಕ್ಕೆ ಬಳಸತಕ್ಕದ್ದು ಮತ್ತು ಇಂತಹ ನಿಧಿಗಳ ಬಳಕೆಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 23 (3) (ಕೆ) ರನ್ವಯ ಸಾಮಾನ್ಯ ಸಭೆಯು ಪುನರವಲೋಕನ ಮಾಡುತ್ತದೆ.

**ಶ್ರೀ ಶಿವಾಜಿ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು.**

**3. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959 ರೀತ್ಯ ಸುಸ್ಥಿದಾರರಿಗೆ 30 ದಿವಸಗಳ ನೋಟೀಸ್ ಜಾರಿ ಮಾಡಿ ಸುಸ್ಥಿ ಸಾಲವನ್ನು ಮಹಾಸಭೆ/ ಚುನಾವಣೆಗೆ 15 ದಿನ ಮುಂಚಿತವಾಗಿ ಕಟ್ಟಿದ್ದರೆ, ತೀರುವಳಿಯ ನಂತರ ಮತದಾರ ಯಾದಿಯೊಂದಿಗೆ ಸೇರಿಸಲು ಅವಕಾಶವಿರುತ್ತದೆ. 1997ರ ಸೌಹಾರ್ದ ಕಾಯ್ದೆಯಂತೆ ಕನಿಷ್ಠ ಸೇವೆ, ಸರ್ವಸದಸ್ಯರ ಸಭೆಯ ಹಾಜರಾತಿ ಮತ್ತು ಸಹಕಾರಿಗೆ ಸಂದಾಯವಾಗಬೇಕಾದ ಬಾಕಿ ಪರಿಗಣಿಸಿ ಅರ್ಹ ಮತದಾರರ ಪಟ್ಟಿ ತಯಾರಿಸಲಾಗಿರುತ್ತದೆ. ಸೌಹಾರ್ದ ಸಹಕಾರಿಗಳು ಸುಸ್ಥಿದಾರರಿಗೆ 1959ರ ಕಾಯ್ದೆಯಂತೆ ನೋಟೀಸ್ ಜಾರಿ ಮಾಡಿ ಸುಸ್ಥಿ ಸಾಲ ತೀರಿದ ನಂತರ ಮತದಾರರ ಪಟ್ಟಿಗೆ ಸೇರಿಸಬಹುದೇ?**

**ಉತ್ತರ :** ಯಾವುದೇ ಸದಸ್ಯನು ಸಹಕಾರಿಯ ಉಪವಿಧಿಯನ್ವಯ ಸಾಮಾನ್ಯ ಕನಿಷ್ಠ ವ್ಯವಹಾರವನ್ನು ಮಾಡಿದ್ದರೆ ಮತ್ತು ನಿರಂತರ ಮೂರು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾಗಿಲ್ಲದಿದ್ದರೆ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ಸಂದರ್ಭಾನುಸಾರ ಚುನಾವಣೆಯ ಹದಿನೈದು ದಿನಗಳ ಪೂರ್ವದಲ್ಲಿ ಸಾಲ ಪಡೆದುಕೊಂಡ ವ್ಯಕ್ತಿಯು ಬಾಕಿಯಾಗಿದ್ದು, ನೋಟೀಸ್ ನೀಡಿದಾಗ ಮೊತ್ತವನ್ನು ಪಾವತಿಸಿದ್ದರೆ ಅಂತಹ ಸದಸ್ಯನು ಸಹಕಾರಿಯ ಅರ್ಹ ಸದಸ್ಯರ ಯಾದಿಯಲ್ಲಿ ಸೇರಲು ಅರ್ಹನಾಗುತ್ತಾನೆ.

**4. 1997ರ ಸೌಹಾರ್ದ ಕಾಯ್ದೆ ಕಲಂ 20 ಮತ್ತು ಸಹಕಾರಿ ಉಪವಿಧಿ 8ರನ್ವಯ ಚುನಾವಣೆಗೆ ಮತದಾರರ ಪಟ್ಟಿ ತಯಾರಿಸುವ ಕುರಿತು ಜಿಜ್ಞಾಸೆ ಉಂಟಾಗಿದ್ದು, ಈ ಬಗ್ಗೆ ಕಾನೂನು ರೀತ್ಯ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದ ಅವಶ್ಯಕತೆ ಇರುತ್ತದೆ.**

**ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಅಧ್ಯಾಯ 4ರ ಕಲಂ 20 (2)ರಲ್ಲಿ ಯಾವುದೇ ವ್ಯಕ್ತಿ ಸಹಕಾರಿಯ ಸೇವೆಯನ್ನು ಕನಿಷ್ಠ ಸತತ 2 ವರ್ಷಗಳವರೆಗೆ ಬಳಸಿಕೊಂಡಿಲ್ಲದಿದ್ದರೆ, ಅಥವಾ**

**ಸಹಕಾರಿಯ 3 ನಿರಂತರ ಸಾಮಾನ್ಯ ಸಭೆಗೆ ಪೂರ್ವಾನುಮತಿ ಇಲ್ಲದೇ ಗೈರಾದರೆ, ಅಥವಾ**

**ಉಪವಿಧಿಯಾನುಸಾರ ನಿರ್ದಿಷ್ಟ ಮೊತ್ತ ಮತ್ತು ಅವಧಿಯನ್ನು ಮೀರಿ ಸಹಕಾರಿಗೆ ಸಂದಾಯ ಮಾಡಬೇಕಾದ ಯಾವುದೇ ಸಂದಾಯವನ್ನು ಪಾವತಿಸಲು ವಿಫಲನಾದರೆ, ಅಂತಹ ವ್ಯಕ್ತಿ ಸದಸ್ಯನಾಗಲು ಅನರ್ಹ ಎಂದು ಉಲ್ಲೇಖಿಸಲಾಗಿದ್ದು, ಆದರೆ ಉಪನಿಯಮ 8ರನ್ವಯ (ಅ)/ (ಆ) ರಲ್ಲಿ ಒಂದನ್ನು ಪಾಲಿಸತಕ್ಕದ್ದು ಹಾಗೂ 3 ಸಾಮಾನ್ಯ ಸಭೆಗೆ ಹಾಜರಿರಬೇಕು ಎಂದು ಇರುತ್ತದೆ. ಚುನಾವಣೆಗೆ ಅರ್ಹತಾ ಪಟ್ಟಿ ತಯಾರಿಸುವಾಗ ಕಾಯಿದೆ 20 ರನ್ವಯ ಅಥವಾ ಸಹಕಾರಿ ಉಪನಿಯಮ 8ನ್ನು ಪಾಲಿಸಬೇಕೇ? ಎಂಬ ಜಿಜ್ಞಾಸೆ ಉಂಟಾಗಿರುತ್ತದೆ. ಈ ಬಗ್ಗೆ ಸೂಕ್ತ ಕಾನೂನು ಮಾರ್ಗದರ್ಶನ ನೀಡಲು ಕೋರಿದೆ.**

**ಉತ್ತರ :** ಯಾವುದೇ ಸದಸ್ಯನು ಸಹಕಾರಿಯ ಸದಸ್ಯತ್ವದಲ್ಲಿ ಮುಂದುವರೆಯಲು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 20 (2) (ಎ) (ಬಿ) (ಸಿ)ರಲ್ಲಿ ತಿಳಿಸಿರುವಂತೆ ಸಹಕಾರಿಯ ಉಪವಿಧಿಯಲ್ಲಿ ತಿಳಿಸಿರುವ ಸಾಮಾನ್ಯ ಕನಿಷ್ಠ ವ್ಯವಹಾರವನ್ನು ಮಾಡುವುದು ಮತ್ತು ನಿರಂತರ ಮೂರು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾಗಿಲ್ಲದಿರುವುದು ಮತ್ತು ಸಾಲವನ್ನು ಪಡೆದುಕೊಂಡಿದ್ದರೆ ಉಪವಿಧಿಯಾನುಸಾರ ಅಂತಹ ಮೊತ್ತವನ್ನು ನಿಯಮಿತವಾಗಿ ಪಾವತಿಸುವುದು ಕಡ್ಡಾಯವಾಗಿರುತ್ತದೆ.

ಒಂದುವೇಳೆ ಸದಸ್ಯನು ಮೇಲೆ ತಿಳಿಸಿದಂತೆ ಸಹಕಾರಿಯ ಉಪವಿಧಿಯಲ್ಲಿ ತಿಳಿಸಿರುವ ಸಾಮಾನ್ಯ ಕನಿಷ್ಠ ವ್ಯವಹಾರವನ್ನು ಮಾಡದಿದ್ದರೆ ಅಥವಾ ನಿರಂತರ ಮೂರು ಸಾಮಾನ್ಯ ಸಭೆಗಳಿಗೆ ಅನುಮತಿಯನ್ನು ಪಡೆದುಕೊಳ್ಳದೇ ಗೈರುಹಾಜರಾದರೆ ಅಥವಾ ಉಪವಿಧಿಯಾನುಸಾರ ನಿರ್ದಿಷ್ಟ ಮೊತ್ತ ಮತ್ತು ಅವಧಿಯನ್ನು ಮೀರಿ ಸಹಕಾರಿಗೆ ಸಂದಾಯ ಮಾಡಬೇಕಾದ ಯಾವುದೇ ಸಂದಾಯವನ್ನು ಪಾವತಿಸಲು ವಿಫಲನಾದರೆ ಅಂತಹ ಸದಸ್ಯನು ಸದಸ್ಯನಾಗಿ ಮುಂದುವರೆಯಲು ಅನರ್ಹನಾಗುತ್ತಾನೆ.

ಅಂತಹ ವ್ಯಕ್ತಿಗೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 20 (3)ರನ್ವಯ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ನಂತರ ಸದಸ್ಯತ್ವದಲ್ಲಿ ಮುಂದುವರೆಸುವ ಕುರಿತು ಸೂಕ್ತವಾಗಿ ನಿರ್ಣಯಿಸಬಹುದಾಗಿರುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 20 (2) (ಎ) (ಬಿ) (ಸಿ)ರಲ್ಲಿ ತಿಳಿಸಿರುವ ಮೂರು ಅಂಶಗಳೂ ಸಹ ಕಡ್ಡಾಯವಾಗಿದ್ದು, ಯಾವುದೇ ಒಂದು ಅಂಶವನ್ನು ಪಾಲಿಸಲು ಸಹಕಾರಿಯ ಸದಸ್ಯನು ವಿಫಲನಾದರೂ ಸಹ ಅಂತಹ ಸದಸ್ಯನು ಸದಸ್ಯನಾಗಿ ಮುಂದುವರೆಯಲು ಅನರ್ಹನಾಗುತ್ತಾನೆ.

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 10 (1) ರನ್ವಯ ಸಹಕಾರಿಯ ಉಪವಿಧಿಯು ಅಧಿನಿಯಮ ಮತ್ತು ನಿಯಮಗಳಿಗೆ ಅನುಗುಣವಾಗಿ ಇರಬೇಕಾಗಿರುತ್ತದೆ. ಯಾವುದೇ ಪ್ರಾವಧಾನ ಅಧಿನಿಯಮ ಮತ್ತು ನಿಯಮಗಳಿಗೆ ವಿರುದ್ಧವಾಗಿದ್ದರೆ, ಅಧಿನಿಯಮದಲ್ಲಿನ ಅಂಶವನ್ನೇ ಪಾಲಿಸಬೇಕಾಗುತ್ತದೆ.

# ಮಾರಾಟಾಧಿಕಾರಿಯ ಕರ್ತವ್ಯ ಹಾಗೂ ಜವಾಬ್ದಾರಿಗಳು

– ಎಸ್.ಎಸ್.ಕಟಗೇರಿ, ಸಹಾಯಕ ನಿಬಂಧಕರು (ನಿವೃತ್ತ)

**ಸೌಹಾರ್ದ ಸಹಕಾರಿಗಳಿಗಾಗಿ ಪ್ರತ್ಯೇಕ ನ್ಯಾಯಾಲಯ ಕಾರ್ಯನಿರ್ವಹಿಸುತ್ತಿರುವುದು ತಮಗೆಲ್ಲ ತಿಳಿದಿದೆ. ಈ ನ್ಯಾಯಾಲಯದಲ್ಲಿ ಇತ್ಯರ್ಥವಾಗುವ ಸಾಲ ವಸೂಲಾತಿ ಪ್ರಕರಣಗಳನ್ನು ಸರಕಾರದಿಂದ ನೇಮಿಸಲ್ಪಟ್ಟ ವಸೂಲಾಧಿಕಾರಿಯವರು ಆದೇಶ ಜಾರಿ ಮಾಡುವ ಅಧಿಕಾರ ಹೊಂದಿದ್ದಾರೆ. ಈ ವಸೂಲಾಧಿಕಾರಿಯವರು ವಿವಿಧ ಜಿಲ್ಲೆಗಳಲ್ಲಿ ವಸೂಲಾಧಿಕಾರಿಗಳನ್ನು ನೇಮಕ ಮಾಡುವ ಅಧಿಕಾರ ಹೊಂದಿದ್ದಾರೆ. ಈ ವಸೂಲಾಧಿಕಾರಿಗಳು ಅಂದರೆ ಮಾರಾಟ ಅಧಿಕಾರಿಗಳು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವಿವರಣೆ ಈ ಲೇಖನದಲ್ಲಿದೆ.**

**ಮಾರಾಟಾಧಿಕಾರಿ :** ಸೌಹಾರ್ದ ಸಹಕಾರಿ ಬ್ಯಾಂಕಿನ/ ಸಹಕಾರಿಯ ಸಾಲ ವಸೂಲಾತಿ ಪ್ರಕ್ರಿಯೆಯಲ್ಲಿ ಮಾರಾಟಾಧಿಕಾರಿಗಳು ಪ್ರಮುಖ ಪಾತ್ರ ವಹಿಸುತ್ತಾರೆ. ಪ್ರತಿ ಅಮಲ್ಜಾರಿ ಪ್ರಕರಣವು ಮುಖ್ಯವಾಗಿದ್ದು, ಒಂದು ಪ್ರಕರಣ ಇನ್ನೊಂದರಂತಿರುವುದಿಲ್ಲ. ವಾಸ್ತವಾಂಶಗಳು ಭಿನ್ನವಾಗಿರುತ್ತವೆ. ಸಾಲಗಾರರ ಮನಃಸ್ಥಿತಿಯು ವಿಭಿನ್ನವಾಗಿರುತ್ತದೆ. ಸಂದರ್ಭಗಳಿಗನುಸಾರವಾಗಿ ವಿವಿಧೋಪಾಯಗಳನ್ನು ಬಳಸಿಕೊಂಡು ವಸೂಲಾತಿ ಕಾರ್ಯ ಮುಂದುವರೆಸಬೇಕಾಗುತ್ತದೆ. ವಿನಾಕಾರಣ ವಿಳಂಬಕ್ಕೆ ಆಸ್ಪದ ನೀಡದೇ ವಿವೇಚನೆ ಮತ್ತು ಕುಶಲತೆಯಿಂದ ಕಾರ್ಯನಿರ್ವಹಿಸಿದರೆ ವಸೂಲಾತಿಯಲ್ಲಿ ಯಶಸ್ಸು ಸಾಧಿಸುವುದು ಸಾಧ್ಯ. ಈಗ ಬಳಸಲಾಗುತ್ತಿರುವ

| ಕ್ರ.ಸಂ. | ವಿವರಗಳು | ಕನಿಷ್ಠ ಅವಧಿ | ಗರಿಷ್ಠ ಅವಧಿ |
|---|---|---|---|
| 01. | ಚರಾಸ್ತಿ ಜಪ್ತಿ ಹಾಗೂ ಮಾರಾಟದ ಮೂಲಕ ಅಮಲ್ಜಾರಿ ಅರ್ಜಿ ಸ್ವೀಕೃತವಾದ ತಕ್ಷಣ 7 ದಿನಗಳ ಗಡುವು ನಿಗದಿಪಡಿಸಿ ಬಾಕಿ ಹಣ ಪಾವತಿಸುವಂತೆಯೂ ತಪ್ಪಿದಲ್ಲಿ ಜಪ್ತಿ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಯಪಡಿಸುವ ನೋಟೀಸು. | 07 | 07 |
| 02. | ಫಾರ್ಮ್–4/2 (ಯಾವುದು ಅನ್ವಯವಾಗುವುದೋ ಆ ನಮೂನೆಯಲ್ಲಿ) ಜಾರಿ ಮಾಡುವ ಮೂಲಕ ಜಪ್ತಿ ಕಾರ್ಯ ಕೈಗೊಳ್ಳಲು. | 07 | 07 |
| 03. | ಜಪ್ತಿ ಮಾಡಲಾದ ಚರ ಸ್ವತ್ತುಗಳನ್ನು ಮಾರಾಟ ಮಾಡಲಾಗುವ ದಿನಾಂಕ ನಿಗದಿಪಡಿಸಿ ಹರಾಜು ಅಧಿಸೂಚನೆ ಹೊರಡಿಸುವ ಫಾರ್ಮ್–6/5. (ಯಾವುದು ಅನ್ವಯವಾಗುವುದೋ ಆ ನಮೂನೆಯಲ್ಲಿ) | 15 | 20 |
| 04. | ಅನಿವಾರ್ಯ ಕಾರಣಗಳಿಂದಾಗಿ ಲಿಲಾವು/ಹರಾಜು ಮುಂದೂಡಿದಲ್ಲಿ ಪುನಃ ನೋಟೀಸು/ಅಧಿಸೂಚನೆ ಹೊರಡಿಸಲು. | 15 | 20 |
| 05. | ಸ್ಥಿರಾಸ್ತಿ ಜಪ್ತಿ ಹಾಗೂ ಮಾರಾಟದ ಮೂಲಕ ಸ್ಥಿರ ಸ್ವತ್ತು ಜಪ್ತಿ ಮಾಡಿ ಮಾರಾಟ ಮಾಡಲು ವಸೂಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು. | –– | 10 |
| 06. | ಹತ್ತು ದಿನಗಳ ಗಡುವು ನಿಗದಿಪಡಿಸಿ ಫಾರ್ಮ್–7/6 (ಯಾವುದು ಅನ್ವಯವಾಗುವುದೋ ಆ ನಮೂನೆಯಲ್ಲಿ) ರಲ್ಲಿ ನೋಟೀಸು. | –– | 05 |
| 07. | ನೋಟೀಸು ನೀಡಿದ ದಿನಾಂಕದಿಂದ ಗಡುವು ಮುಕ್ತಾಯಗೊಳ್ಳಲು. | 10 | 10 |
| 08. | ಸ್ಥಿರಾಸ್ತಿ ಈ ಮುಂಚೆ ಜಪ್ತಿಯಾಗಿಲ್ಲದಿದ್ದರೆ ಜಪ್ತಿ ಮಾಡಲು. | –– | 05 |
| 09. | ಸ್ಥಿರ ಸ್ವತ್ತುಗಳನ್ನು ಹರಾಜಿಗೆ ತರಲು ಫಾರ್ಮ್–8 ಮತ್ತು ಫಾರ್ಮ್–9 ನೊಂದಿಗೆ ವಸೂಲಾಧಿಕಾರಿಗಳಿಗೆ ಪ್ರಥಮ ಬಾರಿಗೆ ಪ್ರಸ್ತಾವನೆ ಸಲ್ಲಿಸಲು. | 05 | 10 |
| 10. | ವಸೂಲಾಧಿಕಾರಿಗಳ ಅನುಮೋದನೆ/ಸಹಿ ನಂತರ ನೋಟೀಸುಗಳನ್ನು ಹೊರಡಿಸಲು. | 05 | 10 |
| 11. | ನೋಟೀಸುಗಳನ್ನು ಜಾರಿ ಮಾಡಿದ ದಿನಾಂಕದಿಂದ ಹರಾಜು ದಿನಾಂಕದವರೆಗೆ. (ಪ್ರಥಮ ಬಾರಿ) | 30 | 40 |
| 12. | ಯಾವುದೇ ಕಾರಣಗಳಿಂದಾಗಿ ಲಿಲಾವು/ಹರಾಜು ಮಾರಾಟಾಧಿಕಾರಿಗಳ ಹಂತದಲ್ಲಿ ಮುಂದೂಡಲ್ಪಟ್ಟಿದ್ದರೆ. | 07 | 07 |
| 13. | ಅನಿವಾರ್ಯ ಕಾರಣಗಳಿಂದಾಗಿ ಲಿಲಾವು/ಹರಾಜು ಮುಂದೂಡಲ್ಪಟ್ಟಿದ್ದರೆ ಪುನಃ ನೋಟೀಸು ಹೊರಡಿಸುವುದಕ್ಕಾಗಿ ವಸೂಲಾಧಿಕಾರಿಗಳಿಗೆ ದ್ವಿತೀಯ ಬಾರಿ ಪ್ರಸ್ತಾವನೆ ಸಲ್ಲಿಸಲು. | 07 | 10 |
| 14. | ವಸೂಲಾಧಿಕಾರಿಗಳ ಅನುಮೋದನೆ/ಸಹಿ ನಂತರ ನೋಟೀಸುಗಳನ್ನು ಹೊರಡಿಸಲು. | 05 | 10 |
| 15. | ನೋಟೀಸು ಜಾರಿ ಮಾಡಿದ ದಿನಾಂಕದಿಂದ ಹರಾಜು ದಿನಾಂಕದವರೆಗೆ. (ದ್ವಿತೀಯ ಬಾರಿ) | 30 | 40 |
| 16. | ಯಾವುದೇ ಕಾರಣಗಳಿಂದಾಗಿ ಲಿಲಾವು/ಹರಾಜು ಮಾರಾಟಾಧಿಕಾರಿಗಳ ಹಂತದಲ್ಲಿ ಮುಂದೂಡಲ್ಪಟ್ಟಿದ್ದರೆ. | 07 | 07 |
| 17. | ಅನಿವಾರ್ಯ ಕಾರಣಗಳಿಂದಾಗಿ ಲಿಲಾವು/ಹರಾಜು ಮುಂದೂಡಲ್ಪಟ್ಟಿದ್ದರೆ ಪುನಃ ನೋಟೀಸು ಹೊರಡಿಸುವುದಕ್ಕಾಗಿ ವಸೂಲಾಧಿಕಾರಿಗಳಿಗೆ ತೃತೀಯ ಬಾರಿ ಪ್ರಸ್ತಾವನೆ ಸಲ್ಲಿಸಲು. | 07 | 10 |
| 18. | ವಸೂಲಾಧಿಕಾರಿಗಳ ಅನುಮೋದನೆ/ಸಹಿ ನಂತರ ನೋಟೀಸುಗಳನ್ನು ಹೊರಡಿಸಲು. | 05 | 10 |
| 19. | ನೋಟೀಸು ಜಾರಿ ಮಾಡಿದ ದಿನಾಂಕದಿಂದ ಹರಾಜು ದಿನಾಂಕದವರೆಗೆ. (ತೃತೀಯ ಬಾರಿ) | 30 | 40 |
| 20. | ಹರಾಜು ಮುಕ್ತಾಯಗೊಂಡ ನಂತರ ಮಾರಾಟ ಸ್ಥಿರೀಕರಣಕ್ಕಾಗಿ ಪ್ರಸ್ತಾವನೆ ಸಲ್ಲಿಸಲು. | 45 | 50 |
| 21. | ಸ್ಥಿರೀಕರಣ ಆದೇಶ ಹೊರಡಿಸಿದ ನಂತರ ಬ್ಯಾಂಕಿನ ಅಮಾನತು ಖಾತೆಯಲ್ಲಿನ ಹಣದ ಮೊತ್ತವನ್ನು ಸಾಲದ ಖಾತೆಗೆ ಹೊಂದಾಣಿಕೆ ಮಾಡಿಕೊಳ್ಳಲು. | 02 | 05 |

**ಪ್ರತಿ ಸಲದ ಹರಾಜು ಪ್ರಕ್ರಿಯೆಗೆ ಕನಿಷ್ಠ 42 ದಿನಗಳು ಮತ್ತು ಗರಿಷ್ಠ 60 ದಿನಗಳು ಬೇಕಾಗುತ್ತವೆ. ಆದ ಕಾರಣ ತೃತೀಯ ಯತ್ನ ಫಲಿಸಿದಲ್ಲಿ ಬೇಕಾಗುವ ಕನಿಷ್ಠ ಅವಧಿ 195 ದಿನಗಳು ಮತ್ತು ಗರಿಷ್ಠ ಅವಧಿ 279 ದಿನಗಳು. ಹೀಗೆ ಸಾಲಗಾರನ ಚರ ಹಾಗೂ ಸ್ಥಿರ ಎರಡೂ ಆಸ್ತಿಗಳ ಜಪ್ತಿ ಹಾಗೂ ಮಾರಾಟದ ಮೂಲಕ ಕೈಗೊಳ್ಳುವ ವಸೂಲಾತಿ ಕಾರ್ಯಕ್ಕಾಗಿ ಕನಿಷ್ಠ 224 ದಿನಗಳು ಮತ್ತು ಗರಿಷ್ಠ 320 ದಿನಗಳು ಸಾಕಾಗುತ್ತವೆ.**




ಮಾನದಂಡವನ್ನನುಸರಿಸಿ ಸೌಹಾರ್ದ ಬ್ಯಾಂಕಿನ ಸ್ಥಿತಿ-ಗತಿಗಳ ಹಿನ್ನೆಲೆಯನ್ನು ಗಮನಿಸಿದಾಗ ವಸೂಲಾತಿ ಕಾರ್ಯದಲ್ಲಿ ವೇಗವರ್ಧನೆ ಆಗಬೇಕಾಗಿದೆ. ಅದಕ್ಕಾಗಿ ಕೆಳಗೆ ವಿವರಿಸಿದ ರೀತಿಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಮತ್ತು ನಿಯಮಗಳ (ಮಂತ್ರದಂಡ) (ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರ ಅಡಿಯಲ್ಲಿ ನೋಂದಾಯಿಸಲಾದ ಸಹಕಾರ ಸಂಘಗಳು/ ಬ್ಯಾಂಕುಗಳು ಸದರಿ ಕಾಯ್ದೆ ಮತ್ತು ನಿಯಮಗಳ) ಪ್ರಕಾರ ಕಾರ್ಯನಿರ್ವಹಿಸಿದರೆ ವಿಳಂಬವನ್ನು ಖಂಡಿತವಾಗಿಯೂ ತಡೆಗಟ್ಟಬಹುದು ಮತ್ತು ಬ್ಯಾಂಕಿನ ಅನುತ್ಪಾದಿತ ಆಸ್ತಿ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸಬಹುದು.

ವಿವರವಾಗಿ ಮೇಲೆ ನಮೂದಿಸಿದ ಪ್ರಕಾರ ಚರಾಸ್ತಿ ಜಪ್ತಿ ಹಾಗೂ ಮಾರಾಟ ಕಾರ್ಯ ಪೂರೈಸಲು ಕನಿಷ್ಠ 22 ದಿನಗಳು ಮತ್ತು ಗರಿಷ್ಠ 34 ದಿನಗಳು ಸಾಕು. ಒಂದು ವೇಳೆ ಯಾವುದೇ ಕಾರಣಕ್ಕಾಗಿ ಹರಾಜನ್ನು ಮುಂದೂಡಿದ್ದಲ್ಲಿ ಮಾತ್ರ ಹೆಚ್ಚಿನ 07 ದಿನಗಳು ಬೇಕಾಗುತ್ತವೆ. ಅದೇ ರೀತಿ ಸ್ಥಿರಾಸ್ತಿ ಜಪ್ತಿ ಮತ್ತು ಮಾರಾಟ ಕಾರ್ಯ ಪೂರೈಸಲು ಕನಿಷ್ಠ 95 ದಿನಗಳು ಮತ್ತು ಗರಿಷ್ಠ 140 ದಿನಗಳು ಸಾಕು. ಒಂದು ವೇಳೆ ಯಾವುದೇ ಕಾರಣಕ್ಕಾಗಿ ಹರಾಜನ್ನು ಮುಂದೂಡಿದ್ದಲ್ಲಿ ಮಾತ್ರ ಹೆಚ್ಚಿನ 07 ದಿನಗಳು ಬೇಕಾಗುತ್ತವೆ.

ಆದರೆ ಪ್ರಥಮ ಪ್ರಯತ್ನದಲ್ಲಿ ಸ್ಥಿರಾಸ್ತಿಯು ಯಾವುದೇ ಕಾರಣಕ್ಕಾಗಿ ಮಾರಾಟವಾಗದಿದ್ದಾಗ ಅದನ್ನು ಮತ್ತೆ ಹರಾಜಿಗೆ ತರಲೇಬೇಕಾಗುತ್ತದೆ. ಆಗ ಹೆಚ್ಚುವರಿಯಾಗಿ ಕನಿಷ್ಠ 42 ದಿನಗಳು ಮತ್ತು ಗರಿಷ್ಠ 60 ದಿನಗಳು ಬೇಕಾಗುತ್ತವೆ.




ಈ ರೀತಿ ಪ್ರತಿ ಸಲದ ಹರಾಜು ಪ್ರಕ್ರಿಯೆಗೆ ಕನಿಷ್ಠ 42 ದಿನಗಳು ಮತ್ತು ಗರಿಷ್ಠ 60 ದಿನಗಳು ಬೇಕಾಗುತ್ತವೆ. ಆದ ಕಾರಣ ತೃತೀಯ ಯತ್ನ ಫಲಿಸಿದಲ್ಲಿ ಬೇಕಾಗುವ ಕನಿಷ್ಠ ಅವಧಿ 195 ದಿನಗಳು ಮತ್ತು ಗರಿಷ್ಠ ಅವಧಿ 279 ದಿನಗಳು. ಹೀಗೆ ಸಾಲಗಾರನ ಚರ ಹಾಗೂ ಸ್ಥಿರ ಎರಡೂ ಆಸ್ತಿಗಳ ಜಪ್ತಿ ಹಾಗೂ ಮಾರಾಟದ ಮೂಲಕ ಕೈಗೊಳ್ಳುವ ವಸೂಲಾತಿ ಕಾರ್ಯಕ್ಕಾಗಿ ಕನಿಷ್ಠ 224 ದಿನಗಳು ಮತ್ತು ಗರಿಷ್ಠ 320 ದಿನಗಳು ಸಾಕಾಗುತ್ತವೆ. ವಿಶೇಷವಾಗಿ ಗಮನದಲ್ಲಿಡಬೇಕಾದ ಅಂಶವೇನೆಂದರೆ ಅಮಲ್ಜಾರಿ ಅರ್ಜಿಯನ್ನು ವಸೂಲಾಧಿಕಾರಿಗಳ ಕಛೇರಿಯಲ್ಲಿ ದಾಖಲು ಮಾಡುವಾಗಲೇ ಫಾರಂ-4/2 ಹಾಗೂ ಫಾರಂ-6/7 (ಯಾವುದು ಅನ್ವಯವಾಗುತ್ತದೊ ಆ ಫಾರಂ) ಎರಡಕ್ಕೂ ಅನುಮೋದನೆ ಪಡೆದಲ್ಲಿ ಗರಿಷ್ಠ ಅವಧಿಯಲ್ಲಿ ಇನ್ನೂ ಹತ್ತು ದಿನಗಳನ್ನು ಉಳಿಸಬಹುದಾಗಿದೆ. ಅದೇ ರೀತಿ ಸ್ಥಿರಾಸ್ತಿ ಆಧಾರವಿಲ್ಲದ ಮತ್ತು ವೇತನ ಆಧಾರಿತ ಸಾಲದ ಪ್ರಕರಣಗಳಲ್ಲಿ ಅಮಲ್ಜಾರಿ ಅರ್ಜಿಯನ್ನು ದಾಖಲು ಮಾಡುವಾಗಲೇ ಫಾರಂ-4/2 (ಯಾವುದು ಅನ್ವಯವಾಗುತ್ತದೊ ಆ ಫಾರಂ) ಮತ್ತು ವೇತನ ಜಪ್ತಿಗಾಗಿ ನೋಟೀಸು ಎರಡಕ್ಕೂ ಅನುಮೋದನೆ ಪಡೆದಲ್ಲಿ ಗರಿಷ್ಠ ಅವಧಿಯಲ್ಲಿ ಇನ್ನೂ ಸಾಕಷ್ಟು ದಿನಗಳನ್ನು ಉಳಿಸಬಹುದಾಗಿದೆ.

ಹೀಗೆ ಪ್ರತಿ ಅಮಲ್ಜಾರಿ ಪ್ರಕರಣದಲ್ಲಿ ವೈಜ್ಞಾನಿಕವಾಗಿ ಸ್ವಯಂ ಗಡುವು ನಿಗದಿಪಡಿಸಿಕೊಂಡು ದಿನಂಪ್ರತಿ ಕಾರ್ಯನಿರ್ವಹಿಸಿದ್ದಾದಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಮತ್ತು ಕರ್ನಾಟಕ ಸಹಕಾರಿ ನಿಯಮಗಳು, 2004ರ ಪ್ರಕಾರ (ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರಡಿಯಲ್ಲಿ ನೋಂದಾಯಿಸಲಾದ ಸಹಕಾರ ಸಂಘಗಳು/ ಬ್ಯಾಂಕುಗಳು ಸದರಿ ಕಾಯ್ದೆ ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ಪ್ರಕಾರ) ಕೈಗೊಳ್ಳುವ ಕ್ರಮ ಮಂತ್ರದಂಡದಂತೆ ಕೆಲಸ ಮಾಡುವುದರಿಂದ ವಸೂಲಾತಿ ಕಾರ್ಯ ಯಶಸ್ವಿಗೊಳ್ಳುತ್ತದೆ. ಮೇಲೆ ವಿವರಿಸಲಾದಂತೆ ಸೌಹಾರ್ದ ಸಹಕಾರಿ/ ಬ್ಯಾಂಕಿನ ಆಡಳಿತ ಮಂಡಲಿ, ಮುಖ್ಯಕಾರ್ಯನಿರ್ವಾಹಕರು ಹಾಗೂ ಮಾರಾಟಾಧಿಕಾರಿಗಳು ಪ್ರತಿಯೊಂದು ಅಂಶವನ್ನೂ ಗಂಭೀರವಾಗಿ ಪರಿಗಣಿಸಿ ಸೇವಾ ಮನೋಭಾವದಿಂದ ಕಾಲಮಿತಿಗೆ ಒಳಪಟ್ಟು ಕಾರ್ಯಪ್ರವೃತ್ತರಾದಲ್ಲಿ ಬ್ಯಾಂಕಿನ ಎನ್.ಪಿ.ಎ (ಅನುತ್ಪಾದಿತ ಆಸ್ತಿ) ಭೂತ ಸಂಪೂರ್ಣ ಉಚ್ಚಾಟನೆಯಾಗಿ ಪ್ರಮಾಣ 'ಶೂನ್ಯ' ಹಂತಕ್ಕೆ ತಲಪುವಲ್ಲಿ ಯಾವುದೇ ಸಂದೇಹವಿಲ್ಲ. ಆದರೆ, ಯಾವುದೇ ಹಂತದಲ್ಲಿ ಯಾರೇ ಆಗಲಿ ಉದಾಸೀನತೆಯಿಂದ ವರ್ತಿಸಿದರೆ ಈಗಾಗಲೇ ಉಚ್ಚಾಟನೆಗೊಂಡ ಈ ಭೂತ ಮತ್ತೇ ತಪ್ಪದೇ ಪ್ರತ್ಯಕ್ಷವಾಗುವುದೆಂಬುದು ಮಾತ್ರ ನೆನಪಿರಲಿ.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆಗಳು

### ನಿರ್ಮಾಣ್ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಉಡುಪಿ


ಶ್ರೀ ಮಂಚಿ ನಿತ್ಯಾನಂದ ನಾಯಕ್, ಅಧ್ಯಕ್ಷರು


ಶ್ರೀ ಬಿ. ಮಧುಸೂದನ ನಾಯಕ್, ಉಪಾಧ್ಯಕ್ಷರು

### ಕೊಟಬಾಗಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಕೊಟಬಾಗಿ


ಶ್ರೀ ರಮೇಶ ಮಲ್ಲಪ್ಪ ಪಾಟೀಲ, ಅಧ್ಯಕ್ಷರು


ಶ್ರೀ ಕೆಂಪಯ್ಯ ಮಲ್ಲಯ್ಯ ಮಠಪತಿ, ಉಪಾಧ್ಯಕ್ಷರು

### ನಾಗರಿಕ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಗುರುವಾಯನಕೆರೆ


ಶ್ರೀ ಯಂ. ಮಧುಕರ ಹೆಬ್ಬಾರ, ಅಧ್ಯಕ್ಷರು


ಶ್ರೀ ರಾಜೀವ ಸಾಲಿಯಾನ ಉಪಾಧ್ಯಕ್ಷರು

### ಶ್ರೀ ಭಗವಾನ್ ಮಹಾವೀರ ಪತ್ತಿನ ಸೌಹಾರ್ದ ಸಹಕಾರಿ ನಿ., ರಾಯಚೂರು


ಶ್ರೀ ರಾಜೇಂದ್ರ ಕುಮಾರ್ ಮೂಥಾ ಜೈನ್,ಅಧ್ಯಕ್ಷರು


ಶ್ರೀ ವಿಜಯರಾಜ್ ಮೂಥಾ ಜೈನ್,ಉಪಾಧ್ಯಕ್ಷರು

### ಶ್ರೀ ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಸಾಲಿಗ್ರಾಮ



ಶ್ರೀ ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಸಾಲಿಗ್ರಾಮ ಸಹಕಾರಿಯ ಅಧ್ಯಕ್ಷರಾಗಿ ಶ್ರೀ ಆನಂದ ಸಿ. ಕುಂದರ್‌ರವರು ಹಾಗೂ ಉಪಾಧ್ಯಕ್ಷರಾಗಿ ಶ್ರೀ ಸಂಜೀವ ಜಿ. ಯವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

## ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ನಿರ್ದೇಶಕರುಗಳಿಗಾಗಿ "ನಾಯಕತ್ವ ವಿಕಸನ" ತರಬೇತಿ

ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಬೆಂಗಳೂರಿನಲ್ಲಿ ದಿನಾಂಕ 19.10.2016 ರಿಂದ 21.10.2016ರವರೆಗೆ ಸಹಕಾರಿ ಸಂಸ್ಥೆಗಳ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ನಿರ್ದೇಶಕರುಗಳಿಗಾಗಿ 3 ದಿನಗಳ "ನಾಯಕತ್ವ ವಿಕಸನ" ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ. ಈ ತರಬೇತಿ ಕಾರ್ಯಕ್ರಮದಲ್ಲಿ ಕೇವಲ 30 ನಿರ್ದೇಶಕರಿಗೆ ಮಾತ್ರ ಭಾಗವಹಿಸಲು ಅವಕಾಶವಿದ್ದು, ಸೌಹಾರ್ದ ಸಹಕಾರಿಗಳಲ್ಲಿನ ಈ ವರ್ಗದ ನಿರ್ದೇಶಕರಿಗೆ ತರಬೇತಿಯಲ್ಲಿ ಭಾಗವಹಿಸಲು ಅವಕಾಶ ಮಾಡಿ ಕೊಡಲು ಕೋರಿದೆ. ಈ ತರಬೇತಿಯಲ್ಲಿ ಭಾಗವಹಿಸುವ ಎಲ್ಲಾ ಪ್ರತಿನಿಧಿಗಳಿಗೆ ಬೆಂಗಳೂರಿಗೆ ಬಂದು ಹೋಗುವ ಸಾಮಾನ್ಯ ದರ್ಜೆಯ ರೈಲು ದರ ಅಥವಾ ಸಾಮಾನ್ಯ ಬಸ್ಸಿನ ದರವನ್ನು, ಊಟ–ಉಪಹಾರ, ವಸತಿ ಹಾಗೂ ಅಧ್ಯಯನ ಸಾಹಿತ್ಯವನ್ನು ಆರ್‌ಐಸಿಎಂನಿಂದ ಭರಿಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ಡಾ.ಜಯಪ್ರಕಾಶ್, ಕಾರ್ಯಕ್ರಮ ಸಂಚಾಲಕರು, ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಮೊಬೈಲ್ ಸಂಖ್ಯೆ 9663720974 ಇವರನ್ನು ಸಂಪರ್ಕಿಸುವುದು.

## ಹೆಣ್ಣು ಹುಟ್ಟಿದರೆ ಗಿಡ ನೆಟ್ಟು ಸಂಭ್ರಮಿಸುವ ಮಾದರಿ ಗ್ರಾಮ



ಅಯ್ಯೋ! ಹೆಣ್ಣು ಹುಟ್ಟಿತ್ತಲ್ಲೋ ದೇವರೇ, ಎಂದು ನಿರಾಶರಾಗುವವರೇ ಹೆಚ್ಚು. ಹುಟ್ಟಿದ್ದು 'ಹೆಣ್ಣು' ಎಂಬ ಕಾರಣಕ್ಕೆ ಹೆತ್ತವರೇ ಆ ಮಗುವನ್ನು ಕಸದ ತಿಪ್ಪೆಗೆ ಬಿಸಾಡಿ ಮನುಷ್ಯತ್ವವನ್ನೇ ಮರೆಯುವವರು ಇದ್ದಾರೆ. ಇದಕ್ಕೊಂದು ಅಪವಾದವಾಗಿದೆ ರಾಜಸ್ಥಾನದ 'ಪಿಪ್ಲಂತಿ' ಎಂಬ ಗ್ರಾಮ. ಅಲ್ಲಿ ಯಾರದೇ ಮನೆಯಲ್ಲಿ ಹೆಣ್ಣು ಹುಟ್ಟಿದರೂ, ಇಡೀ ಊರೇ ಸಂತಸದ ಕಡಲಲ್ಲಿ ತೇಲುತ್ತದೆ ಮಾತ್ರವಲ್ಲ, ಸಾಮೂಹಿಕವಾಗಿ 111 ಗಿಡಗಳನ್ನು ನೆಟ್ಟು ಖುಷಿ ಪಡುತ್ತಾರೆ. ಅವುಗಳನ್ನು ಬೆಳೆಸಿ, ಗಿಡಗಳು ಬೆಳೆದಂತೆಲ್ಲಾ, ಆ ಮಗು ಕೂಡ ಚೆನ್ನಾಗಿ ಬೆಳೆಯಲಿ ಎಂದು ಹಾರೈಸುತ್ತಾರೆ. ಈ ರೀತಿ ಈ ಗ್ರಾಮದಲ್ಲಿ 25 ದಶಲಕ್ಷಕ್ಕೂ ಹೆಚ್ಚು ಗಿಡಗಳನ್ನು ನೆಡಲಾಗಿದೆ.

ಅಷ್ಟೇ ಅಲ್ಲ, ಹೆಣ್ಣು ಮಗು ಹುಟ್ಟಿದ ಕೂಡಲೇ ಗ್ರಾಮದ ಎಲ್ಲಾ ಮನೆಗಳಿಂದ ದೇಣಿಗೆ ಸಂಗ್ರಹಿಸಿ ರೂ.21,000 ಜಮೆ ಮಾಡಿ, ಪೋಷಕರಿಂದ ರೂ.10,000 ಪಡೆದು ಸೇರಿಸಿ ಬ್ಯಾಂಕಿನಲ್ಲಿ ಠೇವಣಿ ಇಡಲಾಗುತ್ತದೆ. ಅದರಿಂದ ಬರುವ ಬಡ್ಡಿಯಿಂದ ಮಗುವಿನ ಶಿಕ್ಷಣ, ಮದುವೆ ವೆಚ್ಚ ಮುಂತಾಗಿ ಎಲ್ಲವನ್ನೂ ಭರಿಸಲಾಗುತ್ತದೆ. ಮತ್ತೊಂದು ವಿಶೇಷವೆಂದರೆ, ಮಗು ಹುಟ್ಟಿದ 20 ವರ್ಷಗಳವರೆಗೆ ಮಗುವಿಗೆ ಮದುವೆ ಮಾಡಲಾಗುವುದಿಲ್ಲ ಎಂಬ ಮುಚ್ಚಳಿಕೆ ಪತ್ರಕ್ಕೆ ಹೆತ್ತವರಿಂದ ಮಗು ಹುಟ್ಟಿದ ಕೂಡಲೇ ಸಹಿ ಹಾಕಿಸಿಕೊಳ್ಳುತ್ತಾರೆ. ಗ್ರಾಮಗಳೆಲ್ಲಾ 'ಪಿಪ್ಲಂತಿ'ಯಂತಾದರೆ, ಗ್ರಾಮಭಾರತ ಅದೆಷ್ಟು ಸುಂದರ ಅನಿಸಿಕೊಳ್ಳುತ್ತದೆ, ಅಲ್ಲವೇ?

**ಸಂಗ್ರಹ : ವೆಂಕಟೇಶ ನಾಯ್ಕ, ಕಿರಿಯ ಸಹಾಯಕ, ಕ.ರಾ.ಸೌ.ಸಂ.ಸ.ನಿ,**

# ಸಾಮಾನ್ಯ ಸೇವಾ ಕೇಂದ್ರ ಯೋಜನೆ (Common Service Centres Scheme) Redefining Governance in India through CSC

ಪಾಲರಾಜ್ ಎ, ಕಿರಿಯ ಅಧಿಕಾರಿ, ಕ.ರಾ.ಸೌ.ಸಂ.ಸ.ನಿ.,



ಕೇಂದ್ರ ಸರ್ಕಾರದ ರಾಷ್ಟ್ರೀಯ ಇ-ಆಡಳಿತ ಯೋಜನೆಯು 2006ರಲ್ಲಿ ಪ್ರಾರಂಭಗೊಂಡಿತು, ಇದು 44 ಗುರಿ ನಿಯೋಜಿತ ಯೋಜನೆಗಳನ್ನು ಹೊಂದಿದ್ದು, ಸಾಮಾನ್ಯ ಸೇವಾ ಕೇಂದ್ರ ಯೋಜನೆಯು ಸಹ ಇದರಲ್ಲಿ ಒಂದಾಗಿದೆ. ಈ ಯೋಜನೆಯ ಮುಖ್ಯ ಗುರಿ ಮಾಹಿತಿ & ತಂತ್ರಜ್ಞಾನ ಇಲಾಖೆಯ ಮತ್ತು ಡಿಜಿಟಲ್ ಭಾರತದ ಕಾರ್ಯಕ್ರಮದಡಿಯಲ್ಲಿ ಮಾಹಿತಿ ಮತ್ತು ತಂತ್ರಜ್ಞಾನ ಸೇವೆಗಳನ್ನು ಹಳ್ಳಿಗಳ ಪ್ರತಿಯೊಬ್ಬ ಜನಸಾಮಾನ್ಯನಿಗೂ ಜಿ2ಸಿ (ಸರ್ಕಾರದಿಂದ-ಜನಸಾಮಾನ್ಯರಿಗೆ) ಮತ್ತು ಬಿ2ಸಿ (ಉದ್ಯಮದಾರರಿಂದ ಗ್ರಾಹಕರಿಗೆ) ಸೇವೆಗಳನ್ನು ಒದಗಿಸುವದಾಗಿದೆ. ಕರ್ನಾಟಕ ಸರ್ಕಾರವು ಸಹ ಈ ಯೋಜನೆಯಡಿಯಲ್ಲಿ ವಿದ್ಯುನ್ಮಾನ ವಿತರಣೆ ಮತ್ತು ನಾಗರೀಕ ಸೇವೆಗಳ ನಿರ್ದೇಶನಾಲಯವು 2001 ರಿಂದಲೇ ನೆಮ್ಮದಿ/ನಾಡ ಕಛೇರಿ ಕೇಂದ್ರ/ಅಟಲ್ ಜಿ ಜನ ಸ್ನೇಹಿ ಕೇಂದ್ರದ ಮುಖಾಂತರ ಅನುಷ್ಠಾನಕ್ಕೆ ತಂದಿದೆ.

ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳಿಗೆ ಸರ್ಕಾರಿ ಮತ್ತು ಸರ್ಕಾರೇತರ ಸೇವೆಗಳನ್ನು ಸದಸ್ಯ ಸಹಕಾರಿಗಳಿಗೆ ಮತ್ತು ಜನಸಾಮಾನ್ಯರಿಗೆ ಒದಗಿಸುವ ವ್ಯವಸ್ಥೆಯನ್ನು ಕಲ್ಪಿಸುವ ಉದ್ದೇಶವನ್ನು ಹೊಂದಿದ್ದು ಸಂಬಂದಪಟ್ಟ ಇಲಾಖೆಯೊಂದಿಗೆ ಪತ್ರ ವ್ಯವಹಾರ ಮತ್ತು ಮಾತುಕತೆಯನ್ನು ನಡೆಸುತ್ತಿದೆ. ಇ-ಸೇವೆಗಳ ಯೋಜನೆಯಡಿಯಲ್ಲಿ ಆರ್.ಟಿ.ಸಿ.ವಿತರಣೆ, ವಿದ್ಯುತ್ ಬಿಲ್ ಸಂಗ್ರಹಣೆ, ಆದಾರ್ ನೋಂದಣಿ, ಜನನ ಮರಣ ಪ್ರಮಾಣ ಪತ್ರ ನೋದಣಿ, ಜಾತಿ ಆದಾಯ ಪ್ರಮಾಣ ಪತ್ರ ವಿತರಣೆ, ಇತ್ಯಾದಿ ಸರ್ಕಾರಿ ಮತ್ತು ಸರ್ಕಾರೇತರ ಸವೆಗಳನ್ನು ಸೌಹಾರ್ದ ಸಹಕಾರಿಗಳ ಮುಖಾಂತರ ಒದಗಿಸಲು ಸಾಕಷ್ಟು ಅವಕಾಶಗಳಿರುವ ನಿಟ್ಟಿನಲ್ಲಿ ಸಾಮಾನ್ಯ ಸೇವಾ ಕೇಂದ್ರ ಯೋಜನೆಯ ಪರಿಚಯ, ರಚನೆ ಮತ್ತು ಸೇವಗಳ ಕುರಿತಾದ ವಿವರ ಈ ಕೆಳಗಿನಂತಿದೆ.

### ಸಾಮಾನ್ಯ ಸೇವಾ ಕೇಂದ್ರ ಯೋಜನೆಯ ಪರಿಚಯ :

ಈ ಯೋಜನೆ ಗ್ರಾಮೀಣ ಪ್ರದೇಶದಲ್ಲಿ 1 ಲಕ್ಷ ಸಾಮಾನ್ಯ ಸೇವಾ ಕೇಂದ್ರಗಳು ಮತ್ತು ನಗರ ಭಾಗದಲ್ಲಿ ಹತ್ತು ಸಾವಿರ ಸಾಮಾನ್ಯ ಸೇವಾ ಕೇಂದ್ರಗಳ ಅನುಷ್ಠಾನಗೊಳ್ಳುತ್ತಿದ್ದು ಉತ್ತಮ ಗುಣಮಟ್ಟದ ಇ-ಆಡಳಿತ ಸೇವೆ ಮತ್ತು ಜನಸಾಮಾನ್ಯರಿಗೆ ಅವ್ಯಶಕತೆ ಇರುವ ಸರ್ಕಾರಿ ಮತ್ತು ಸರ್ಕಾರೇತರ ಸೇವೆಗಳನ್ನು ಒಂದೇ ಸೂರಿನಡಿ ಒದಗಿಸುತಿದ್ದು ಡಿಜಿಟಲ್ ಇಂಡಿಯಾ ಕಾರ್ಯಕ್ರಮದಡಿ ಸಾಮಾನ್ಯ ಸೇವಾ ಕೇಂದ್ರಗಳು ಈ ಮೂರು ದೃಷ್ಟಿಕೋನದಲ್ಲಿ ಕಾರ್ಯನಿರ್ವಹಿಸಲು ಮುಂದಾಗಿದೆ.

- ಪ್ರತಿ ನಾಗರೀಕನಿಗೆ ಮೂಲ ಸೌಕರ್ಯಗಳ ಅರಿವು ಮತ್ತು ಉಪಯುಕ್ತತೆಯನ್ನು ನೀಡುವುದು.
- ಇ-ಆಡಳಿತ ಮತ್ತು ಜನ ಸಾಮಾನ್ಯನಿಗೆ ಅವಶ್ಯಕವಿರುವ ಸರ್ಕಾರ ಮತ್ತು ಖಾಸಗಿ ಸೇವೆಗಳನ್ನು ಒದಗಿಸುವುದು.
- ನಾಗರೀಕರ ಡಿಜಿಟಲ್ ಸಬಲೀಕರಣ.

### ಸಾಮಾನ್ಯ ಸೇವಾ ಕೇಂದ್ರಗಳ ರಚನೆ :

1. ಮೊದಲ ಮಟ್ಟದಲ್ಲಿ ಗ್ರಾಮ ಮಟ್ಟದ ವಾಣಿಜ್ಯೋದ್ಯಮಿ (Village level entrepreneur) 5-6 ಗ್ರಾಮಗಳ ಗುಂಪಿಗೆ ಸೇವೆ ಒದಗಿಸಲು ಆಯ್ಕೆ ಮಾಡಲಾಗುತ್ತದೆ.
2. ಎರಡನೇ ಮಟ್ಟದಲ್ಲಿ ಸಾಮಾನ್ಯ ಸೇವಾ ಕೇಂದ್ರಗಳನ್ನು ನಿರ್ವಹಿಸುವ ಏಜೆನ್ಸಿಯಲ್ಲಿ 500-1000 ಕೇಂದ್ರಗಳಿಗೆ ಜವಾಬ್ದಾರಿಯಾಗಿದ್ದು, ಗ್ರಾಮ ಮಟ್ಟದ ವಾಣಿಜ್ಯೋದ್ಯಮಿ ನೆಟ್‌ವರ್ಕ್ ಮತ್ತು ವ್ಯಾಪಾರವನ್ನು ಉತ್ತೇಜಿಸಲು ಮತ್ತು ಸೇವಾ ಕೇಂದ್ರಗಳ ನಿರ್ವಾಹಕರಾಗಿ ಏಜೆನ್ಸಿಗಳು ಕಾರ್ಯನಿರ್ವಹಿಸಿರುತ್ತದೆ.
3. ಮೂರನೇ ಮಟ್ಟದಲ್ಲಿ ರಾಜ್ಯ ಸರ್ಕಾರ ನಿಯೋಜಿತ ಏಜೆನ್ಸಿಗಳ ಮೂಲಕ ರಾಜ್ಯದಲ್ಲಿ ಈ ಯೋಜನೆಯನ್ನು ಜಾರಿ ಮಾಡುವುದು ಮತ್ತು ಅಗತ್ಯ ನೀತಿ ರೂಪಿಸುವುದು ಮತ್ತು ಎರಡನೇ ಮಟ್ಟದ ಏಜೆನ್ಸಿಗಳಿಗೆ ಬೆಂಬಲ ನೀಡುವುದು.
4. ಇತರೆ ವಿಧದ ಲೇವಾದೇವಿ ಮತ್ತು ಆಕರ್ಷಕ ಸೇವೆಗಳನ್ನು ಜನ ಸಾಮಾನ್ಯರಿಗೆ ಒದಗಿಸಲು ಸಾರ್ವಜನಿಕ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಸೇರಿದಂತೆ 48 ಬ್ಯಾಂಕುಗಳು ಸಹಭಾಗಿತ್ವನ್ನು ಹೊಂದಿ, ಸೇವೆಯನ್ನು ಸಾಮಾನ್ಯ ಸೇವಾ ಕೇಂದ್ರಗಳು ಸೇವೆಯನ್ನು ಒದಗಿಸಲಾಗುತ್ತಿದೆ.

### ಸಾಮಾನ್ಯ ಸೇವಾ ಕೇಂದ್ರದ ಲಕ್ಷಣಗಳು :

ಈ ಯೋಜನೆಯು ಸಾರ್ವಜನಿಕ ಖಾಸಗಿ ಸಹಭಾಗಿತ್ವದ (PPP Frame work-Public Private Partnership) ಅಡಿಯಲ್ಲಿ ರಚಿಸಲಾಗಿದೆ. ಸಾಮಾನ್ಯ ಸೇವಾ ಕೇಂದ್ರಗಳು ಲಕ್ಷಣಗಳು ಈ ಕೆಳಗಿನಂತಿದೆ.

- ಗ್ರಾಮೀಣ ಉದ್ಯಮಶೀಲತೆಯ ಬಗ್ಗೆ ಹೆಚ್ಚು ಗಮನ.
- ಖಾಸಗಿ ವಲಯದಲ್ಲಿನ ಸೇವೆಗಳನ್ನು ಒದಗಿಸುವುದು.
- ಬಹು ಆಯಾಮಗಳಿಂದ ಸಮುದಾಯದ ಅಗತ್ಯಗಳಿಗನುಗುಣವಾಗಿ ಸೇವೆಯನ್ನು ಒದಗಿಸುವುದು.
- ಗ್ರಾಮೀಣ ಭಾಗದ ಸಾಮರ್ಥ್ಯದ ಮಟ್ಟ ಮತ್ತು ಜೀವನೋಪಾಯದ ಮಟ್ಟವನ್ನು ವೃದ್ಧಿಸುವುದು.
- ವಿವಿಧ ಸರ್ಕಾರಿ ಮತ್ತು ಸರ್ಕಾರೇತರ ಸೇವೆಗಳಿಗೆ ಏಜೆಂಟ್ ಆಗಿ ಕಾರ್ಯನಿರ್ವಹಿಸುವುದು.
- ವಿವಿಧ ಜಿ2ಸಿ ಮತ್ತು ಬಿ2ಸಿ ಸೇವೆಗಳ ಒನ್ ಸ್ಟಾಪ್ ಪರಿಹಾರ.

- ಒಂದು ಸಾಮಾನ್ಯ ಸೇವಾ ಕೇಂದ್ರ 6 ಹಳ್ಳಿಗಳ ಕ್ಲಸ್ಟರ್‌ನಲ್ಲಿದ್ದು, ಈ ಜಾಲದಲ್ಲಿ 6 ಲಕ್ಷ ಹಳ್ಳಿಗಳನ್ನು ಹೊಂದಿದೆ.

**ಸಾಮಾನ್ಯ ಸೇವಾ ಕೇಂದ್ರಗಳು ಒದಗಿಸುತ್ತಿರುವ ಸೌಲಭ್ಯಗಳು :**

ಸಾಮಾನ್ಯ ಸೇವಾ ಕೇಂದ್ರ್ರಗಳು ಈಗ ಪ್ರತಿ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿ, ಗ್ರಾಮ ಮಟ್ಟದ ವಾಣಿಜ್ಯೋದ್ಯಮಿ ಮುಖಾಂತರ ಸೇವೆಗಳನ್ನು ಒದಗಿಸಲಾಗುತ್ತಿದೆ. ವಿವಿಧ ಸೇವೆಗಳು ಅಂದರೆ ಜಿ–ಸಿ (ಗ್ರಾಹಕರಿಂದ ಸರ್ಕಾರಕ್ಕೆ), ಬಿ–ಸಿ (ಉದ್ಯಮದಿಂದ ಗ್ರಾಹಕರಿಗೆ) ಮತ್ತು ಬಿ2ಬಿ (ವ್ಯವಹಾರದಿಂದ ವ್ಯವಹಾರಕ್ಕೆ) ಭಾರತದಲ್ಲಿ ಸಾಮಾನ್ಯ ಸೇವಾ ಕೇಂದ್ರ್ರಗಳ ಮುಖಾಂತರ ನೀಡಲಾಗುತ್ತಿದೆ.

**1. ಜಿ2ಸಿ ಸೇವೆಗಳು : (ಸರ್ಕಾರದಿಂದ–ಜನಸಾಮಾನ್ಯರಿಗೆ)**

- ವಿಮಾ ಸೇವೆಗಳು.
- ಪಾಸ್ ಪೋರ್ಟ್.
- ಇ–ನಾಗರೀಕ & ಇ–ಜಿಲ್ಲಾ ಸೇವೆಗಳು (ಜನನ/ಮರಣ ಪ್ರಮಾಣ ಪತ್ರ).
- ಪಿಂಚಣಿ ಸೇವೆಗಳು.
- ಅಪೋಲೋ ಟೆಲಿ ಮೆಡಿಸಿನ್.
- ಆಧಾರ್ ಮುದ್ರಣಾ ಮತ್ತು ನೋಂದಣಿ.
- ಪ್ಯಾನ್ ಕಾರ್ಡ್.
- ಚುನಾವಣಾ ಸೇವೆಗಳು.
- ಇ–ಕೋರ್ಟ್ ಮತ್ತು ಫಲಿತಾಂಶ ಸೇವೆಗಳು.
- ರಾಜ್ಯ ವಿದ್ಯುತ್ ಬಿಲ್ ಮತ್ತು ನೀರಿನ ಬಿಲ್ ಕಲೆಕ್ಷನ್ ಸೇವೆಗಳು.
- ಅಂಚೆ ಇಲಾಖೆ ಸೇವೆಗಳು.
- ಸ್ವಚ್ಛ ಭಾರತ್ ಯೋಜನೆ.
- ಡಿಜಿಟಲ್ ಇಂಡಿಯಾ.

**2. ಬಿ2ಸಿ ಸೇವೆಗಳು : (ಉದ್ಯಮದಾರರಿಂದ ಗ್ರಾಹಕರಿಗೆ)**

- ಆನ್‌ಲೈನ್ ಕ್ರಿಕೆಟ್ ಕೋರ್ಸ್.
- ಐ.ಆರ್.ಟಿ.ಸಿ. ವಿಮಾನ ಮತ್ತು ಬಸ್ ಟಿಕೆಟ್ ಸೇವೆಗಳು.
- ಮೊಬೈಲ್ ಮತ್ತು ಡಿಟಿಎಚ್ ರೀಚಾರ್ಜ್
- ಇಂಗ್ಲೀಷ್ ಮಾತನಾಡುವ ಕೋರ್ಸ್
- ಇ–ಕಾಮರ್ಸ್ ಮಾರಾಟ (ಪುಸ್ತಕ, ಎಲೆಕ್ಟ್ರಾನಿಕ್ಸ್, ಮನೆ ವಸ್ತುಗಳು ಇತ್ಯಾದಿ)
- ಕೃಷಿ ಸೇವೆಗಳು.
- ಸಿಎಸ್ಸಿ ಬಜಾರ್.
- ಇ–ಕಲಿಕೆ

3. **ಶೈಕ್ಷಣಿಕ ಸೇವೆಗಳು :** ಶೈಕ್ಷಣಿಕ ಸೇವೆಗೆ ಸಂಬಂಧಿಸಿದಂತೆ ಮಾಹಿತಿ ಮತ್ತು ತಂತ್ರಜ್ಞಾನದ ಬಗ್ಗೆ ಅರಿವು ಮೂಡಿಸುವುದು, ಜನರನ್ನು ಆಧುನಿಕ ತಂತ್ರಜ್ಞಾನಕ್ಕೆ ಪ್ರೋತ್ಸಾಹಿಸುವುದು, ಆರ್ಥಿಕತೆ ನಿರ್ವಹಣೆ, ಕಾನೂನು ಹಕ್ಕು ಮತ್ತು ಶಿಕ್ಷಣ ಸೇವೆಗಳನ್ನು ಗ್ರಾಮೀಣ ಮಟ್ಟದಲ್ಲಿ ಒದಗಿಸುವುದು.

**ಡಿಜಿಟಲ್ ಶಿಕ್ಷಣ :** ರಾಷ್ಟ್ರೀಯ ಡಿಜಿಟಲ್ ಸಾಕ್ಷರತಾ ಮಿಷನ್ ಮತ್ತು ಸೈಬರ್ ಗ್ರಾಮ ಯೋಜನೆಯನ್ನು ಸಿ.ಎಸ್.ಸಿ ಮುಖಾಂತರ ಪ್ರಚುರಪಡಿಸುವುದು

**ಆರ್ಥಿಕ ಶಿಕ್ಷಣ :** ನಬಾರ್ಡ್ ಆರ್ಥಿಕ ಸಾಕ್ಷರತಾ ಯೋಜನೆ. ಹೂಡಿಕೆದಾರ ಜಾಗೃತಿ ಕಾರ್ಯಕ್ರಮವನ್ನು ಆಯ್ದ ಸಿಎಸ್‌ಸಿಗಳಿಂದ ಅರಿವು ಮೂಡಿಸುವುದು.

**ಶಿಕ್ಷಣ ಪೆಸಿಲಿಟೇಷನ್ ಸರ್ವೀಸ್ :** ಒಪೇನ್ ಸ್ಕೋಲಿಂಗ್ ಸೇವೆಗಳು, ಬೇಸಿಕ್ ಕಂಪ್ಯೂಟರ್ ಕೋರ್ಸ್‌ಗಳು, ಆನ್‌ಲೈನ್ ಇಂಗ್ಲೀಷ್ ಕಲಿಕೆ ಕೋರ್ಸ್‌ಗಳ ಬಗ್ಗೆ ಮಾಹಿತಿ ಒದಗಿಸುವುದು.



4. **ಬ್ಯಾಂಕಿಂಗ್ ಸೇವೆಗಳು :** ಸಾಮಾನ್ಯ ಸೇವಾ ಕೇಂದ್ರ್ರಗಳು ಬ್ಯಾಂಕಿಂಗ್ ವ್ಯವಹಾರದ ಏಜೆಂಟ್ ಆಗುವುದರ ಮುಖಾಂತರ ಠೇವಣಿ, ವಾಪಸ್ಸಾತಿ, ಬ್ಯಾಲೆನ್ಸ್ ವಿಚಾರಣೆ, ಖಾತೆ ಹೇಳಿಕೆ, ಠೇವಣಿ ಖಾತೆಗಳು, ಖಾತೆ ಕೊರತೆ, ಸಾಮಾನ್ಯ ಉದ್ದೇಶದ ಕ್ರೆಡಿಟ್ ಕಾರ್ಡ್, ಕಿಸಾನ್ ಕ್ರೆಡಿಟ್ ಕಾರ್ಡ್, ಕ್ರೆಡಿಟ್ ಸೌಲಭ್ಯಗಳನ್ನು 42 ಸಾರ್ವಜನಿಕ ಮತ್ತು ಖಾಸಗಿ ವಲಯದ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಜೊತೆ ಸಹಬಾಗಿತ್ವ ಹೊಂದಿ ಕಾರ್ಯ ನಿರ್ವಹಿಸುತ್ತಿದೆ.
5. **ವಿಮಾ ಸೇವೆಗಳು :** ವಿಮೆಗೆ ಸಂಬಂಧಿಸಿದಂತೆ ಗ್ರಾಮೀಣ ಮಟ್ಟದಲ್ಲಿ ಸಿಎಸ್‌ಸಿ ಮತ್ತು ವಿಎಲ್‌ಇ ಮೂಲಕ ವಿಮೆ ಉತ್ಪನ್ನಗಳು ಮತ್ತು ಸೇವೆಗಳನ್ನು ಒದಗಿಸುತ್ತಿದೆ. ಜೀವ ವಿಮೆ, ಆರೋಗ್ಯ ವಿಮೆ, ಬೆಳೆ ವಿಮೆ, ವೈಯಕ್ತಿಕ ಅಪಘಾತ, ಮೋಟಾರ್ ವಿಮೆ ಇತ್ಯಾದಿ ಸೇವೆಗಳನ್ನು ಒದಗಿಸಲಾಗುತ್ತಿದೆ ಮತ್ತು ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ.
6. **ಇತರೆ ಸೇವೆಗಳು :** ಕೃಷಿಗೆ ಸಂಬಂಧಿಸಿದ ಮಾಹಿತಿಯನ್ನು ತಜ್ಞರ ಸಲಹೆ, ರೈತರಿಗೆ ಸಹಾಯದ ಜೊತೆಗೆ ಹವಾಮಾನ ಮಾಹಿತಿ, ಮಣ್ಣಿನ ಮಾಹಿತಿಯನ್ನು ನಾಗರೀಕರಿಗೆ ಒದಗಿಸಲಾಗುತ್ತದೆ. ಭಾರತೀಯ ನೌಕಾ ಪಡೆ, ವಾಯುಪಡೆ ನೇಮಕಾತಿಗೆ ಅಧಿಸೂಚನೆ ಮತ್ತು ಇತರೆ ನೇಮಕಾತಿ ಬಗ್ಗೆ ಮಾಹಿತಿಯನ್ನು ಒದಗಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ ಮತ್ತು ಆದಾಯ ತೆರಿಗೆ ರಿಟರ್ನ್ ಸಹ ಸಲ್ಲಿಕೆ ಮಾಡಲು ಅಕಾಶ ಕಲ್ಪಿಸಲಾಗಿದೆ.

ಸಾಮಾನ್ಯ ಸೇವಾ ಕೇಂದ್ರ್ರಗಳು ಡಿಜಿಟಲ್ ಭಾರತ ನಿರ್ಮಾಣದಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕರ್ನಾಟಕದಲ್ಲಿ ಜಿ2ಸಿ ಸೇವೆಗಳನ್ನು (ಸರ್ಕಾರದಿಂದ–ಜನಸಾಮಾನ್ಯರಿಗೆ) ವಿದ್ಯುನ್ಮಾನ ವಿತರಣೆ ಮತ್ತು ನಾಗರೀಕ ಸೇವೆಗಳ ನಿರ್ದೇಶನಾಲಯ 2001ರಿಂದಲೇ ನೆಮ್ಮದಿ/ನಾಡ ಕಛೇರಿ ಕೇಂದ್ರ/ಅಟಲ್ ಜಿ ಜನ ಸ್ನೇಹಿ ಕೇಂದ್ರದ ಮುಖಾಂತರ ಅನುಷ್ಠಾನಕ್ಕೆ ತರಲಾಗಿದೆ. ಕೆಲವು ರಾಜ್ಯಗಳಲ್ಲಿ ಕರ್ನಾಟಕದ ಯೋಜನೆಯ ಮಾದರಿಯಲ್ಲೇ ಜಿ2ಸಿ ಸೇವೆಗಳನ್ನು ಒದಗಿಸುತ್ತಿವೆ. ಉಳಿದಂತೆ ಸಾಮಾನ್ಯ ಸೇವೆ ಕೇಂದ್ರ್ರಗಳ ಅನುಷ್ಠಾನದೊಂದಿಗೆ ನಾಗರೀಕ ಸೇವೆಗಳನ್ನು ದೇಶದಾದ್ಯಂತ ಒದಗಿಸುತ್ತಿವೆ. ವಿದ್ಯುನ್ಮಾನ ವಿತರಣೆ ಮತ್ತು ನಾಗರೀಕ ಸೇವೆಗಳ ನಿರ್ದೇಶನಾಲಯವು ಪ್ರಸ್ತುತ ಕರ್ನಾಟಕದಲ್ಲಿ ಸಾಮಾನ್ಯ ಸೇವಾ ಕೇಂದ್ರ್ರಗಳ ಅನುಷ್ಠಾನಕ್ಕೆ ಸರ್ಕಾರ ನಿಯೋಜಿತ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದೆ. ಸಹಕಾರಿ ಕ್ಷೇತ್ರದಲ್ಲೂ ಸಹ ಡಿಜಿಟಲ್ ಇಂಡಿಯಾ ನಿರ್ಮಾಣಕ್ಕೆ ಸರ್ಕಾರಿ ಮತ್ತು ಸರ್ಕಾರೇತರ ಸೇವೆಗಳನ್ನು ಒದಗಿಸಲು ಸಾಕಷ್ಟು ಅವಕಾಶಗಳಿದ್ದು, ಸದಸ್ಯರಿಗೆ ಸೇವೆಗಳನ್ನು ಒದಗಿಸಬಹುದಾಗಿದೆ.



ಕಗ್ಗ ಪದ್ಯಗಳಲ್ಲಿ ಸಹಕಾರ ಸಾರ – 6

# ಕಗ್ಗ ಪದ್ಯಗಳಲ್ಲಿ ಸಹಕಾರದ ಕಂಪು – "ಒಬ್ಬನು ಎಲ್ಲರಿಗಾಗಿ, ಎಲ್ಲರೂ ಎಲ್ಲರಿಗಾಗಿ"

▶▶ ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.

ಇದುವರೆಗೆ ಹಿಂದಿನ ಶ್ರೇಣಿ ಬರಹಗಳಲ್ಲಿ ಪರೋಕ್ಷ ವಾಕ್ಯಗಳಾದ "ಪ್ರತ್ಯೇಕ ಸುಖವದಲ್ಪದದು", "ಒಬ್ಬನುಣುವೂಟದಲಿ ಸವಿಯಿಲ್ಲ", "ತರಣಿಕಿರಣದ ನಂಟು", "ಬಿದ್ದುದನು ನಿಲ್ಲಿಪುದೆ ನರನ ಮೃತ್ಯುಂಜಯತೆ" ಇವುಗಳಿಂದ ಸಹಕಾರ ತತ್ವದೆಡೆಗೆ ವಾಲಿ ಬದುಕನ್ನು ಹಸನುಗೊಳಿಸಿಕೊಳ್ಳಿಯೆಂದ ಡಿವಿಜಿಯವರು ಇದೀಗ ಸಹಕಾರ ತತ್ವದ ಮೂಲ ಧ್ಯೇಯವಾಕ್ಯವಾದ "ಎಲ್ಲರಿಗಾಗಿ ನಾನು, ನನಗಾಗಿ ಎಲ್ಲರೂ" ಎಂಬುದನ್ನು ಪ್ರಸ್ತಾಪಿಸಿ ನೇರವಾಗಿ ಸಹಕಾರ ತತ್ವವನ್ನು ಪ್ರತಿಪಾದಿಸುತ್ತಾ ಇದಕ್ಕೆ ಮೂಲ ಘಟಕಗಳಾಗಿ, ಪರಿಕರಗಳಾಗಿ ಮನೆ, ರಾಜ್ಯ, ಸಂಸಾರಗಳನ್ನು ಉಲ್ಲೇಖಿಸಿದ್ದಾರೆ. ಈ ಬಗೆಗಿನ ಡಿವಿಜಿಯವರ ಚಮತ್ಕಾರದ ಪದ್ಯವನ್ನು ಗಮನಿಸಿ:

**"ಎಲ್ಲರಿಗಮಾಗಿ ತಾನ್ ಎಲ್ಲರುಂ ತನಗಾಗಿ**
**ನಿಲ್ಲುವೇಕಾತ್ಮತೆಯ ಬಾಳ್ವೆಯಂ ಕಲಿಯಲ್**
**ಸಲ್ಲುವುಪಕರಣಗಳು ಮನೆರಾಜ್ಯ ಸಂಸಾರ**
**ವಲ್ಲಗಳೆಯದಿರವನು ಮಂಕುತಿಮ್ಮ"**

ಡಿವಿಜಿಯವರು ಈ ಪದ್ಯದಲ್ಲಿ ಮೂಲ ಘಟಕಗಳಾದ ಮನೆ, ಸಂಸಾರ, ರಾಜ್ಯಗಳ ಬಗ್ಗೆ ಹೇಗೆ ನಾವು ಸ್ವಾಭಿಮಾನದ ನಿಲುವು ತಳೆಯುತ್ತೇವೆಯೋ ಅಂತೆಯೇ ನಮ್ಮ ನಮ್ಮ ನಡುವೆ ಉತ್ತಮ ಸಹಕಾರ ವೇರ್ಪಡಬೇಕಾದರೆ ಮನೆ, ಸಂಸಾರ, ರಾಜ್ಯಗಳ ಅಸ್ತಿತ್ವಗಳ ಇರುವಿಕೆಯನ್ನು ಅಲ್ಲಗಳೆಯದೇ ಒಪ್ಪಿಕೊಳ್ಳಿರೆಂದು ಪ್ರತಿಪಾದಿಸುತ್ತಾ ತನ್ಮೂಲಕ "ಒಬ್ಬನು ಎಲ್ಲರಿಗಾಗಿ, ಎಲ್ಲರೂ ಎಲ್ಲರಿಗಾಗಿ" ಬಾಳುತ್ತಾ ಸುಸಂಘಟಿತ ಬದುಕನ್ನು ಸಹಕಾರ ಸೇತುವೆಯ ಮೂಲಕ ಸಾಧಿಸಿಕೊಂಡು ಜೀವನದ ಸಾರ ಸಮೃದ್ಧಿಯನ್ನು ಪಡೆಯಿರೆಂದು ಕರೆಕೊಡುತ್ತಿದ್ದಾರೆ. ಆಧ್ಯಾತ್ಮ ಜೀವಿಯಾದ ಡಿವಿಜಿಯವರು ಈ ಪದ್ಯದ ಮೂಲಕ ನಮಗೆ ಏಕಾಕಿತನವನ್ನು ತೊರೆದು ನಮ್ಮ ಮನೆಯವರೆಂಬ, ರಕ್ತ ಸಂಬಂಧಿಗಳೆಂಬ ಭಾವನೆಯಿಂದ ಬದುಕು ನಡೆಸುತ್ತಾ ಭಗವಂತನನ್ನೂ ಸಹ ಜೊತೆಯಲ್ಲಿಟ್ಟುಕೊಳ್ಳಲು, ಸೂಚನೆ ನೀಡಿರುವುದು ಈ ಕೆಳಗಿನ ಸ್ವಾಮಿ ವಿವೇಕಾನಂದರ ಪದ್ಯವನ್ನು ನೆನಪಿಗೆ ತರುತ್ತದೆ.

**ಜಗವೆಲ್ಲ ಜೊತೆಗಿರಲು ನೀನೊಬ್ಬನಿಲ್ಲದಿರೆ ಸುಖವೇನು ಸುಖವೇನು ಪ್ರಭುವೇ**
**ನೀನೊಬ್ಬ ಜೊತೆಗಿರಲು ಜಗವೆಲ್ಲವೆದುರಾಗೆ ಭಯವೇನು ಭಯವೇನು ಪ್ರಭುವೇ.**

ಮಾನವನಿಗೆ ನಿಸರ್ಗವು ದಟ್ಟಾರಣ್ಯದಲ್ಲಿ ಹಿಂಡು ಹಿಂಡಾಗಿ ಕಾಡಾನೆಗಳ ಬದುಕಿನ ಹಾಗೂ ಹಾರಾಡುವ ಕಾಗೆ, ಜೇನು ಹುಳುಗಳ ಮತ್ತು ಗುಂಪು ಗುಂಪಾಗಿ ಚಲಿಸುವ ಇರುವೆಗಳ ಸಾಮೂಹಿಕ ಜೀವನದ ಮೂಲಕ ಸಹಬಾಳ್ವೆ, ಪರಸ್ಪರ ನಂಬಿಕೆ, ಸಹಾಯ ಮತ್ತು ಸಹಕಾರದ ಮೂಲ ಪಾಠವನ್ನು ಹೇಳಿಕೊಡುತ್ತದೆ. ಅದನ್ನು ನಾವೆಲ್ಲರೂ ಅನುಸರಿಸೋಣ, ಅನುಷ್ಠಾನಕ್ಕೆ ತರೋಣ "ನುಡಿವೀರ"ರು ಮಾತ್ರವಾಗದೇ "ನಡೆವೀರ"ರಾಗೋಣ

**ಸಹಕಾರಂ ಗೆಲ್ಗೆ ಸಹಕಾರಂ ಬಾಳ್ಗೆ**

# ಕವಾಡ ಸೌಹಾರ್ದ ಸಹಕಾರಿಗಳ ಕಾರ್ಯ ಪರಿಶೀಲನಾ ಸಭೆ

**ವಿಜಯಪುರ :** ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಕವಾಡ ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆ ಹಾಗೂ ಪ್ರಗತಿ ಪರಿಶೀಲನಾ ಸಭೆಯನ್ನು ದಿನಾಂಕ 26.09.2016ರಂದು ಜಿಗಜಿವಣಗಿ ಕವಾಡ ಪತ್ತಿನ ಸೌಹಾರ್ದ ಸಹಕಾರಿಯ ಸಭಾಂಗಣದಲ್ಲಿ ನಡೆಯಿತು. ಈ ಸಭೆಯಲ್ಲಿ ತಾಲ್ಲೂಕಿನಲ್ಲಿರುವ ಒಟ್ಟು 17 ಸಹಕಾರಿಗಳಲ್ಲಿ 13 ಸೌಹಾರ್ದ ಸಹಕಾರಿಗಳ 17 ಪ್ರತಿನಿಧಿಗಳು ಭಾಗವಹಿಸಿದ್ದರು. ಸಭೆಯನ್ನು ಸಂಯುಕ್ತ ಸಹಕಾರಿಯ ತರಬೇತಿ ಅಧಿಕಾರಿಯಾದ ಶ್ರೀ ವಿ.ಜೆ.ಕಾರಕೂನ ಹಾಗೂ ವಿಜಯಪುರ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಬಸವರಾಜ ನಡೆಸಿದರು.



ಪ್ರಾರಂಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಬಸವರಾಜರವರು ಸ್ವಾಗತ ಮಾಡಿದ ನಂತರ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಪ್ರತಿನಿಧಿಗಳ ಪರಿಚಯ ಹಾಗೂ ಅವರು ಪ್ರತಿನಿಧಿಸುವ ಕವಾಡ ಸೌಹಾರ್ದ ಸಹಕಾರಿ ಕಾರ್ಯಚಟುವಟಿಕೆಗಳ ಬಗ್ಗೆ ವಿವರ ಪಡೆಯಲಾಯಿತು. ಎಲ್ಲಾ ಕವಾಡ ಸೌಹಾರ್ದ ಸಹಕಾರಿಗಳು ಕರ್ನಾಟಕ ವಾಟರ್ ಸೋರ್ಸ್ ಡೆವಲಪ್‌ಮೆಂಟ್ ಕರ್ನಾಟಕ ಸರಕಾರ ಇವರು ಪ್ರವರ್ತಿಸಿರುವುದರಿಂದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಸ್ವಂತ ಕಟ್ಟಡದ ಹಣಕಾಸಿನ ವ್ಯವಸ್ಥೆ ಉತ್ತಮವಾಗಿದೆ. ಕೇವಲ ಸ್ವಸಹಾಯ ಗುಂಪುಗಳ ಮೂಲಕ ತಮ್ಮ ಸದಸ್ಯರಿಗೆ ಸಾಲ ವಿತರಣೆಯನ್ನು ಮಾಡುವ ಚಟುವಟಿಕೆಯೊಂದನ್ನೇ ಮಾಡುತ್ತಿರುವುದನ್ನು ಗಮನಿಸಿ ಅವರಿಗೆ ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಪ್ರಗತಿ, ವಿವಿಧ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಮಾಹಿತಿ ಹಾಗೂ ಸೌಹಾರ್ದ ಸಹಕಾರಿಗಳು ಏನೆಲ್ಲ ಸೇವೆಗಳನ್ನು ತಮ್ಮ ಸದಸ್ಯರಿಗೆ ಒದಗಿಸಲು ಅವಕಾಶಗಳಿವೆ ಎಂಬುದನ್ನು ವಿವರಿಸಲಾಯಿತು. ಮುಂಬರುವ ದಿನಗಳಲ್ಲಿ ತಮ್ಮ ಉಪವಿಧಿಗಳನ್ನು ತಿದ್ದುಪಡಿ ಮಾಡಲು ಕ್ರಮವಿಡುವಂತೆ ಹಾಗೂ ಹೆಚ್ಚು ಚಟುವಟಿಕೆಗಳನ್ನು ಹಮ್ಮಿಕೊಂಡು ಕ್ರಿಯಾಶೀಲಾ ಸಹಕಾರಿಯಾಗಿ ಕಾರ್ಯನಿರ್ವಹಿಸಬೇಕೆಂದು ಸೂಚಿಸಲಾಯಿತು. ಕವಾಡ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ಸಭೆಯನ್ನು ನಡೆಸಿದ್ದಕ್ಕೆ ಕವಾಡ ಸೌಹಾರ್ದ ಸಹಕಾರಿಗಳು ಸ್ವಾಗತಿಸಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.



# RBI NEWS - SEPTMBER 2016

**K. Vittal Shetty,** kohimavittal@hotmail.com. Mobile : 9845699904

**The fourth bi-monthly monetary policy statement is to be announced on October 4, 2016.**

The Monetary Policy Committee (MPC) will meet on October 3 and 4, 2016 for the fourth bi-monthly monetary policy review for 2016-17. The resolution of the MPC will be placed on the website at 2.30 pm on October 4, 2016.

## I. IMPORTANT NEWS

**September 1, 2016 : Free Annual Credit Report to Individuals :** Given the importance of the credit report in an individual's financial matters, he/she is entitled to have a copy of the report upon request. Further, the objective of providing the free credit report would not be fully met unless this report includes details that figure in the full credit report that is accessed by the credit institutions while considering the request for fresh credit facilities. The report should also provide an opportunity to the borrower to have the errors, if any, in her/his credit history rectified.

Credit Information Companies to provide access in electronic format, upon request and after due authentication of the requester, to one free full credit report (FFCR) including credit score, once in a year (January- December), to individuals whose credit history is available with the CIC. This report must show the latest position of the credit institutions' exposure to the individual as per records available with the CIC

All CICs shall put in place necessary systems to provide access to the above described FFCR once, at any time, during a year, upon request, to individuals whose credit data they hold, from the year commencing January 1, 2017.

**Sep 21, 2016 : Issuer under the Payment and Settlement Systems Act, 2007**

The amendments to the Payment and Settlement Systems Act, 2007 (PSS Act) notified in May 2015 have brought the Legal Entity Identifier services under the ambit of this Act. Accordingly, the Legal Entity Identifier India Limited (LEIL) shall be the "Issuer" under the PSS Act for operating Legal Entity Identifier (LEI) services.

**Sep 23, 2016 : Issue of ₹ 50 banknotes without inset letter, with numerals in ascending size in number panels, and without intaglio printing**

RBI will shortly issue ₹ 50 denomination banknotes in the Mahatma Gandhi Series-2005, without inset letter in both the number panels, bearing signature of Dr. Raghuram G. Rajan, Governor, Reserve Bank of India, and the year of printing '2016' printed on the reverse of the banknote.

The design and security features of these banknotes will be similar to the banknotes of ₹ 50 denomination with the ascending font of numerals in both the number panels issued earlier in Mahatma Gandhi Series- 2005, except the following:

All the banknotes in the denomination of ₹ 50 issued by the Bank in the past will continue to be legal tender.







Date : Sep 28, 2016 - Scheduled Bank's Statement of Position in India as on Friday, September 16, 2016

(Amount in Billions of ₹)

| | | SCHEDULED COMMERCIAL BANKS (Including RRBs) | | | ALL SCHEDULED BANKS | | |
|---|---|---|---|---|---|---|---|
| | | 18-SEP-2015 | 02-SEP-2016 * | 16-SEP-2016 * | 18-SEP-2015 | 02-SEP-2016 * | 16-SEP-2016 * |
| I | a) Deposits | 89083.87 | 98559.59 | 97909.66 | 91467.28 | 101225.08 | 100555.44 |
| | i) Demand | 8027.38 | 9327.91 | 9415.12 | 8224.39 | 9555.37 | 9640.95 |
| | ii) Time | 81056.48 | 89231.6 | 88494.49 | 83242.89 | 91669.64 | 90914.43 |
| II | INVESTMENTS | 26418.87 | 28788.74 | 28393.97 | 27162.64 | 29579.52 | 29181.5 |
| III | BANK CREDIT | 66858.92 | 73241.93 | 73099.75 | 68907.77 | 75480.58 | 75334.09 |

II.Directions,Withdrwals,Penalties&Cancelleation of Licences of Urban Co-operative Banks.

**Sep 01, 2016 :** RBI issues Directions to Maratha Sahakari Bank Ltd., Mumbai, Maharashtra.

**Sep 06, 2016 :** RBI extend Directions to The Vaish Co-operative Commercial Bank Ltd., New Delhi till March 08, 2017.

**Sep 07, 2016 :** RBI extends validity of the Directions issued to the Indian Mercantile Co-operative Bank Ltd., Lucknow, Uttar Pradesh.

**Sep 09, 2016 :** RBI issues Directions to Nashik Zilla Girna Sahakari Bank Ltd., Nashik, Maharashtra.

**Sep 11, 2016 :** RBI issues Directions to Shri Chhatrapati Urban Co-operative Bank Ltd., Pimple Nilakh, District - Pune, Maharashtra.

**Sep 16, 2016 :** RBI imposes penalty of ₹ 1.00 lakh (Rupees one lakh only)on The Gauhati Co-operative Urban Bank Ltd.,

**Sep 19, 2016 :** RBI imposes penalty of ₹ 1.00 lakh (Rupees one lakh only)on NagarikSamabay Bank Ltd., Guwahati.

**Sep 23, 2016 :** RBI issues Directions to Maratha Sahakari Bank Ltd., Mumbai, Maharashtra - Relaxation in payment of deposit.

**Sep 26, 2016 :** RBI issues Directions to The R S Co-operative Bank Ltd., Mumbai, Maharashtra.

**Sep 26, 2016 :** RBI imposes penaltyof ₹ 5.00 lakh (Rupees Five Lakh only) on The Needs of Life Co-operative Bank Ltd, Mumbai.

**Sep 26, 2016 :** RBI imposes penaltyof ₹ 2.00 lakh (Rupees two Lakh only) on Shivam Sahakari Bank Limited, Kolhapur.

**Sep 27, 2016 :** RBI imposes penaltyof ₹ 1.00 lakh (Rupees One Lakh only)on The Deola Merchants Co-operative Bank Ltd., Deola, Dist. Nashik. For details please refer RBI website.



# CO OPERATIVE MOVEMENT IN INDIA AND ABROAD - THE ROAD AHEAD

**Satish Marathe,** Formar Secreatry Indian Bank Association

...(Cntd. From last issue)

## Co Operatives in Developed Countries

In the now-developed countries, in the last two centuries, the Co Operatives have developed without much Government interference. In early days, "friendly" or mutual health society emerged that insured people against sickness and provided basic health care. In countries with a mixed system of State and Private funding, such as France, Germany and the Netherlands, becoming a member of one of the health mutuals is still common for people to gain access to health care.

In the USA, some of the largest health providers are Consumer Co Operatives. In the Pacific Northwest, one Co Operative provides health care to 570,000 members while in the Mid-West another has as many as 630,000 members. In Japan, 120 Consumer Co Operatives provide health care to around three million members, who meet in small "han" groups to discuss preventive health issues.

Consumer Co Operatives which originated in Britain are today the market leaders in Italy, Switzerland, Singapore and Japan. They are equally active in the Scandinavian countries and Atlantic Canada. In the UK, which has seen the fiercest competition amongst the consumer chains, Consumer Co Operatives are fifth in market share and are pre-eminent in the small supermarket sector. Consumer Co Operatives have a strong record of providing decent work culture to their employees while adhering to fair trade practices.

Housing Co Operatives have played an important role in developed economies. Much of the housing built in Norway and Sweden, in the second half of the last century, has been Co Operative. Housing Co Operatives in the USA have been popular among higher income dwellers and retired people. They have been more effective wherever private or public renting has failed.

In New York 27,000 homes abandoned by private landlords have been taken over and renovated by Housing Co Operatives for low income groups. In Britain, Co Operatives have taken over unpopular 'Council' estates even as tenant - owned Co Operatives are challenging conventional landlords.

Another important area of Co Operative involvement is in utilities. In the USA, over 1000 Electricity Co Operatives supply power to around 12per cent of households, mainly in rural areas. In Wales, when privatization of water to investor-owned businesses proved unpopular, the same has been taken over by a semi-Co Operative whose members are stakeholders.

Some of the world's biggest insurers are Co Operatives. The International Co Operative and Mutual Insurance Federation (ICMIF) represent 184 insurance companies in 70 countries, with substantial accrual of premium. Behind the success of these insurance companies is the underpinning principle of pooling risks of large numbers of people without having to pay outside investors, thereby providing insurance at nominal costs. However, recently to prevent governance failures, the UK Government has advocated a new code of conduct for life insurance mutuals.

There are also emerging Co Operatives in personal services such as social care for older people and people with disabilities. Worker Co Operatives have also proven successful in preserving jobs by taking over failed businesses, particularly, in Western Europe in the 1970s and 1980s.

There are primary producer Co Operatives, which supply inputs and do processing and marketing of products of farmers, fishermen and forestry workers. They include some of the world's biggest businesses, including conglomeration of farmers, ranchers and primary Co Operatives whose success has enabled it to be listed in Fortune 500.

At a time when small farmers are struggling to survive in a tough market conditions - falling prices paid by supermarket chains and farm subsidies being cut - there have emerged a Co Operative that operates 400 markets on behalf of 65

Swabhimani Sahakari, Monthly, Posting Day 8th.
Posted at Bangalore PSO, Mysore Road, Bangalore 560026
Registered No. RNP/BGW/1744/2014-16. RNI No. KARBIL - 2004/18001. Pages 28



Co Operatives through which over 12,000 producers directly sell their products to the consumers.

**Challenges Before Co Operatives in Developed Countries :** One of the biggest challenge to Co Operatives is the lack of awareness of their economic potential amongst the Governments and the general public. In Europe, for example, the International Accounting Standards Board seeks to classify members' shares in Co Operatives as liabilities rather than equity or capital. This means members will be considered as creditors of the Co Operative rather than equity owners. International Co Operative organizations are opposing the proposed treatment as this proposal is contrary to the very principle behind the Co Operatives.

Another concern is the treatment of Co Operatives with large market shares as a monopoly. For example, the Swiss Competition Commission is concerned about the large market share of the two Consumer Co Operatives in Switzerland that have between them over 50 per cent of the market share even though the fact is that the consumers who are shareholders actually own the Co Operatives. These Co Operatives are seeking a review of the Monopoly law.

In addition, there have been some instances of de-mutualizations in insurance Co Operatives as result of minimal relationship between members and the management and self-perpetuating attitude of Board members.

**Co Operatives in Transitional and Developing Countries :** The growth of Co Operatives in transitional and developing countries at first faced many challenges. In the transitional countries, Co Operatives have been viewed as State enterprises. However, with the collapse of communism, these Co Operatives also collapsed in East Europe. In the developing countries, Co Operatives in the 1950s and 1960s operated under the sponsorship of national governments as these governments saw Co Operatives as instruments of organizing masses through which the political parties reached out to large segments of population.

All the same, there are several success stories - Sugar Co Operatives, Cotton Co Operatives and Dairy Co Operatives in India and Bangladesh, Coffee Co Operatives in Tanzania and Kenya and in several countries emergence of strong independent Credit Co Operatives. Nevertheless, with market liberalization in the 1990s and the withdrawal of Government support, many state sponsored Co Operatives have failed to compete with the private sector and had to be shutdown. In the aftermath, new Co Operatives, independent of Government support have since emerged. In the transition economies, new liberal laws have been enacted resulting in old Co Operatives being returned to their members and new ones being formed. In Bosnia and in Serbia, for example, agricultural and marketing Co Operatives were formed in response to the demand from a growing supermarket sector.

In transitional economies, the Co Operative movement continues to register growth in areas of Credit, Agricultural, Marketing, Dairy, Fisheries and even in a nascent Tourism and Consumer sectors.

The International Co Operative Alliance Identity Statement and Co Operative principles, the United Nations Guidelines of 2001 and the ILO Recommendation No. 193 on the promotion of Co Operatives have served to guide formation of Co Operatives, as well as to limit the role of Governments to one of providing an enabling environment and level-playing field so that the Co Operatives can operate on a sustainable basis alongside other types of economic enterprises.

(To be continued)

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080-23378375-80, 23474408, 23573291
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1-ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು - 570004. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831-2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ - 585102. ದೂ: 08472-270222.
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ.246, 17 & 18ನೇ ಕ್ರಾಸ್ ಮಧ್ಯ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055. ದೂ : 080-23449933/34.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010